# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY
ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 190 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 30.01.2025 • ಗುರುವಾರ • ಪುಟ:04 • ಬೆಲೆ:2
Volume:02 • Issue: 190 • PRGI No:KARKAN/2023/88055 • VIJAYANAGARA • 30.01.2025 • Thursday • Page:04 • Rs:2



Advertise With HAMPI TIMES
1,10,000+
Digital E-PAPER READERS
No.1 HAMPI TIMES LEADING VIJAYANAGARA District News Paper
Contact for Advertisements: 9448633038


ಈ ಬಾರಿ ಫಲಿತಾಂಶ ನಮ್ಮದೇ
ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ

## ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರಸ್ಪರ್ಧೆ–10

ವಾರ್ಷಿಕ ಪರೀಕ್ಷೆಗೆ ಇಂದಿನಿಂದಲೇ ಸಿದ್ಧರಾಗೋಣ...

ವಿಷಯ: ಬಿಳಿ ರಕ್ತ ಬಣ್ಣದ ರೋಹಿತದ ಪುನರ್ ಸಂಯೋಜನೆಯ ಚಿತ್ರ ಬಿಡಿಸಿ.

ಸೂಚನೆ: ಎ/4 ಹಾಳೆಯ ಅರ್ಧ ಭಾಗದಲ್ಲಿ ಪೆನ್ಸಿಲ್ ಬಳಸಿ ಚಿತ್ರ ಬಿಡಿಸಬೇಕು. ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳು ಬಿಡಿಸಿದ ಅತ್ಯುತ್ತಮ ಒಂದು ಚಿತ್ರವನ್ನು ವಿದ್ಯಾರ್ಥಿಯ ಹೆಸರು, ಫೋಟೊ, ಮಾರ್ಗದರ್ಶಿ ಶಿಕ್ಷಕರ ಹೆಸರು ಮತ್ತು ಶಾಲೆ ವಿಳಾಸದೊಂದಿಗೆ ವಾಟ್ಸಪ್‌ಗೆ ಕಳಿಸಲು ಮನವಿ.

31–01–2025


ರಾಜ್ಯಾದ್ಯಂತ 10ನೇ ತರಗತಿ ಓದುತ್ತಿರುವ ವಿದ್ಯಾರ್ಥಿಗಳು ಶುಕ್ರವಾರ ತಮ್ಮ ಶಾಲೆಯಲ್ಲಿ ಶಿಕ್ಷಕರ ಸಮ್ಮುಖದಲ್ಲಿ 10 ನಿಮಿಷದೊಳಗೆ ಚಿತ್ರ ಬಿಡಿಸಿ, ಮುಖ್ಯಗುರುಗಳು/ಶಿಕ್ಷಕರ ಸಹಿ ಮತ್ತು ನೆರವಿನೊಂದಿಗೆ ಶುಕ್ರವಾರ ಸಂಜೆ 6 ಗಂಟೆಯೊಳಗೆ ವಾಟ್ಸಪ್ ನಂಬರ್‌ಗೆ ಕಳುಹಿಸಬಹುದು.


ಶಾಲೆಯ ದಿ ಬೆಸ್ಟ್ ಚಿತ್ರ ಕಳಿಸುವ ವಾಟ್ಸ್‌ಪ್ ನಂ: 99726 03099
ಶಾಲೆಯಲ್ಲಿ ಚಿತ್ರ ಬಿಡಿಸುವ ಸಾಮೂಹಿಕ ಫೋಟೊ ಕಳಿಸುವ ವಾಟ್ಸ್‌ಪ್ ನಂ: 94486 33038


# ಅಂಕ ಗಳಿಸುವ ಭರವಸೆ ಮೂಡಿಸಿದ ಚಿತ್ರಸ್ಪರ್ಧೆ

## ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರಸ್ಪರ್ಧೆ–9ರ ಅತ್ಯುತ್ತಮ ಚಿತ್ರಗಳು। ಸಾತ್ವಿಕ್ ಅಂಗಡಿ (ಪ್ರಥಮ), ಅಮೃತ (ದ್ವಿತೀಯ), ಎಂ.ಜಿ.ರಾಮಾಂಜಿನಿ (ತೃತೀಯ)

■ ಹಂಪಿ ಟೈಮ್ಸ್ ಹೊಸಪೇಟೆ
ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಕಠಿಣವೆನ್ನುತ್ತಿದ್ದ ವಿಜ್ಞಾನ ವಿಷಯದಲ್ಲೂ ಚಿತ್ರಗಳ ಬರೆಯುವ ಮೂಲಕ ಹೆಚ್ಚಿನ ಅಂಕಗಳಿಸುವ ಭರವಸೆ ಮಕ್ಕಳಲ್ಲಿ ಮೂಡಿದೆ ಎಂದು ಶಿಕ್ಷಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.
ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ವಿಜ್ಞಾನ ವಿಷಯಕ್ಕೆ ಸಂಬಂಧಿಸದಂತೆ ಸಂಭವನೀಯ ಚಿತ್ರಗಳನ್ನು ವಿದ್ಯಾರ್ಥಿಗಳು ಈಗಿನಿಂದಲೇ ಅಭ್ಯಾಸದಲ್ಲಿ ತೊಡಗಿ ಕಡಿಮೆ ಸಮಯದಲ್ಲಿ ಅಂದಚೆಂದವಾಗಿ ಬಿಡಿಸಲೆಂದು ಹಂಪಿ ಟೈಮ್ಸ್ ಪತ್ರಿಕೆವತಿಯಿಂದ ಹಮ್ಮಿಕೊಂಡಿರುವ ವಿಜ್ಞಾನ ಚಿತ್ರಸ್ಪರ್ಧೆಯಲ್ಲಿ ಮಕ್ಕಳು ಉತ್ಸುಕತೆಯಿಂದ ಪಾಲ್ಗೊಳ್ಳುತ್ತಿರುವುದು ಶಿಕ್ಷಕರಲ್ಲಿ ಹರ್ಷ ತಂದಿದೆ. ನೆಫ್ರಾನ್ ನ ರಚನೆಯನ್ನು ತೋರಿಸುವ ಚಿತ್ರವನ್ನು ಬಿಡಿಸಿ ಭಾಗಗಳನ್ನು ಗುರುತಿಸಿ ? ಚಿತ್ರಸ್ಪರ್ಧೆ–9ರಲ್ಲಿ ಹೊಸಪೇಟೆ ತಾಲೂಕಿನ ಕಮಲಾಪುರ ಸ.ಪ.ಪೂ. ಕಾಲೇಜ್ ವಿದ್ಯಾರ್ಥಿ ಸಾತ್ವಿಕ್ ಅಂಗಡಿ (ಪ್ರಥಮ), ಹೊಸಪೇಟೆ ತಾಲೂಕಿನ ಕಮಲಾಪುರ ಕೆ.ಜಿ.ಬಿ.ವಿ. ಶಾಲೆ ವಿದ್ಯಾರ್ಥಿನಿ ಅಮೃತ (ದ್ವಿತೀಯ) ಹಾಗೂ ಹಂಪಿನಕಟ್ಟೆ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿ ಎಂ.ಜಿ.ರಾಮಾಂಜಿನಿ (ತೃತೀಯ) ಸ್ಥಾನ ಪಡೆದಿದ್ದಾರೆ ಎಂದು ಆಯ್ಕೆ ತಂಡದ ಮುಖ್ಯಸ್ಥ ಶಿವತನಯ ಎಸ್.ಸಿ. ತಿಳಿಸಿದ್ದಾರೆ.
ಹೊಸಪೇಟೆ ತಾಲೂಕಿನ 15 ಶಾಲೆಗಳು, ಹ.ಬೊ.ಹಳ್ಳಿಯ 16 ಶಾಲೆ, ಕೊಟ್ಟೂರು–1, ಸಂಡೂರು–1, ಕೂಡ್ಲಿಗಿ–1, ಬಳ್ಳಾರಿ–1, ಗದಗ–1 ಶಿವಮೊಗ್ಗ–1 ಜಿಲ್ಲೆಯಿಂದ ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ. ವಿದ್ಯಾರ್ಥಿಗಳಿಗೆ ಹಂಪಿ ಟೈಮ್ಸ್ ಬಳಗ ಅಭಿನಂದಿಸಿದೆ. >>3








ಸಾತ್ವಿಕ್ ಅಂಗಡಿ (ಪ್ರಥಮ)
ಸ.ಪ.ಪೂ.ಕಾಲೇಜು, ಕಮಲಾಪುರ
ಶಿಕ್ಷಕರು: ಅಸ್ಮಾತರನ್ನುಂ / ನೆಮ್ಯ ನಾಯ್ಕ


ಅಮೃತ (ದ್ವಿತೀಯ)
ಕೆ.ಜಿ.ಬಿ.ವಿ, ಕಮಲಾಪುರ
ಶಿಕ್ಷಕರು–ಗಾಯತ್ರಿ ಜಾಕೀರ್ ಹುಸೇನ್


ಎಂ.ಜಿ ರಾಮಾಂಜಿನಿ (ತೃತೀಯ)
ಸರ್ಕಾರಿ ಪ್ರೌಢಶಾಲೆ, ಹಂಪಿನ ಕಟ್ಟಿ
ಶಿಕ್ಷಕರು–ವೈ.ಪ್ರಶಾಂತ್











ಹಂಪಿ ಟೈಮ್ಸ್‌ನಲ್ಲಿ ಸುದ್ದಿ, ಪ್ರಕಟಣೆ, ಜಾಹೀರಾತಿಗಾಗಿ ಸಂಪರ್ಕಿಸಿ
M:9448633038


### ಆನಂದ ಬಾಣ



### ಮೈಕ್ರೋ ನ್ಯೂಸ್

## ಗ್ರಾಮ ಆಡಳಿತ ಅಧಿಕಾರಿ ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿ ಪ್ರಕಟ

ಹಂಪಿ ಟೈಮ್ಸ್ ಬಳ್ಳಾರಿ
ಜಿಲ್ಲೆಯ ಕಂದಾಯ ಘಟಕದಲ್ಲಿ ಖಾಲಿ ಇರುವ 17 ಗ್ರಾಮ ಆಡಳಿತ ಅಧಿಕಾರಿಗಳ ಹುದ್ದೆಗಳನ್ನು ಮೀಸಲಾತಿವಾರು ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಬಳ್ಳಾರಿ ಜಿಲ್ಲಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ ಎಂದು ಗ್ರಾಮ ಆಡಳಿತ ಅಧಿಕಾರಿಗಳ ನೇರ ನೇಮಕಾತಿ ಆಯ್ಕೆ ಪ್ರಾಧಿಕಾರದ ಅಧ್ಯಕ್ಷರು ಆದ ಜಿಲ್ಲಾಧಿಕಾರಿ ಪ್ರಶಾಂತ್‌ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.
ಈಗಾಗಲೇ ತಾತ್ಕಾಲಿಕ ಆಯ್ಕೆ ಪಟ್ಟಿ ಹಾಗೂ ಹೆಚ್ಚುವರಿ ಆಯ್ಕೆ ಪಟ್ಟಿಗೆ ನಿಗಧಿತ ಅವಧಿಯೊಳಗೆ ಸ್ವೀಕೃತವಾದ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಮೀಸಲಾತಿ ಮತ್ತು ಅಂಕಗಳ ಆಧಾರದ ಮೇಲೆ ಅಭ್ಯರ್ಥಿಗಳ ಅಂತಿಮ ಆಯ್ಕೆಪಟ್ಟಿಯನ್ನು ಬಳ್ಳಾರಿ ಜಿಲ್ಲಾ ವೆಬ್‌ಸೈಟ್ http://bellary.nic.in ನಲ್ಲಿ ಪ್ರಕಟಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

## ಜ.30 ರಂದು ಜಿಲ್ಲಾ ನ್ಯಾಯಾಲಯದಲ್ಲಿ 'ಸ್ವಚ್ಛತಾ ದಿನಾಚರಣೆ' ಕಾರ್ಯಕ್ರಮ

ಹಂಪಿ ಟೈಮ್ಸ್ ಬಳ್ಳಾರಿ
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ ಮತ್ತು ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ "ಪರಿಸರವನ್ನು ಸ್ವಚ್ಛವಾಗಿ ಮತ್ತು ಆರೋಗ್ಯಕರವಾಗಿಸೋಣ" ಎಂಬ ಘೋಷ ವಾಕ್ಯದೊಂದಿಗೆ ಜ.30 ರಂದು ಬೆಳಿಗ್ಗೆ 9 ಗಂಟೆಗೆ ನಗರದ ತಾಳೂರು ರಸ್ತೆಯಲ್ಲಿರುವ ಹೊಸ ನ್ಯಾಯಾಲಯ ಸಂಕೀರ್ಣ ಆವರಣದಲ್ಲಿ 'ಸ್ವಚ್ಛತಾ ದಿನಾಚರಣೆ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್. ಹೊಸಮನೆ ಅವರು ತಿಳಿಸಿದ್ದಾರೆ.


ADVERTISE WITH US
REACH
THOUSANDS OF POTENTIAL CUSTOMERS
HAMPI TIMES DAILY
Classifieds ✓ Display ✓
Take Advantage of Our Special Discounted rates
For More Information 9448633038 www.hampitimes.com


## ಜ.30 ರಂದು ಕ್ಷಯರೋಗ ಜಾಗೃತಿ ಜಾಥಾ

■ ಹಂಪಿ ಟೈಮ್ಸ್ ಬಳ್ಳಾರಿ
ಜಿಲ್ಲಾ ಆಯುಷ್ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಂಟುಬ ಕಲ್ಯಾಣ ಇಲಾಖೆ, ರಾಷ್ಟ್ರೀಯ ಕ್ಷಯರೋಗ ನಿರ್ಮೂಲನಾ ಘಟಕ ಇವರ ಸಹಯೋಗದಲ್ಲಿ ಜ.30 ರಂದು ಬೆಳಿಗ್ಗೆ 9.30 ಗಂಟೆಗೆ 'ಕ್ಷಯರೋಗ ಜಾಗೃತಿ ಜಾಥಾ'ವನ್ನು ನಗರದ ನೂತನ ಜಿಲ್ಲಾಡಳಿತ ಭವನದ ಆವರಣದಿಂದ ಆಯೋಜಿಸಲಾಗಿದೆ.
ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಜಾಥಾಗೆ ಚಾಲನೆ ನೀಡುವರು. ಜಾಥಾವು ನೂತನ ಜಿಲ್ಲಾಡಳಿತ ಭವನದ ಆವರಣದಿಂದ ಆರಂಭವಾಗಿ ತಾರಾನಾಥ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದವರೆಗೆ ನಡೆಯಲಿದೆ ಎಂದು ತಾರಾನಾಥ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## SSLC ಹಂಪಿ ಟೈಮ್ಸ್ ಮಾರ್ಗದರ್ಶಿ

### ಈ ಭಾರಿ ಫಲಿತಾಂಶ ನಮ್ಮದೆ

ದಿನಕ್ಕೊಂದು ವಿಷಯ ಪ್ರಶ್ನೋತ್ತರ ಸರಣಿ ಮಾರ್ಗದರ್ಶಿ
ಹೈಸ್ಕೋರ್ ಗಳಿಸಲು ನಿತ್ಯ ಬರೆದು–ಓದಿ ಪುಟ. 3ರಲ್ಲಿ

# ದೇವಾಲಯಗಳ ವ್ಯವಹಾರ ಡಿಜಿಟಲೀಕರಣ ಶೇ.30ರಷ್ಟು ಆದಾಯ ಹೆಚ್ಚಳ

## ಕೊಟ್ಟೂರು ಗಚ್ಚಿನಮಠ ಧಾರ್ಮಿಕ ದತ್ತಿ ಇಲಾಖೆಗೆ ಸೇರಿಸಲು ಕ್ರಮ

### ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿಕೆ। ಭಕ್ತರಿಗೆ ಮೂರೊಪ್ಪತ್ತು ಪ್ರಸಾದ !




■ ಹಂಪಿ ಟೈಮ್ಸ್ ಕೊಟ್ಟೂರು
ಕೊಟ್ಟೂರೇಶ್ವರ ಸ್ವಾಮಿ ರಥೋತ್ಸವಕ್ಕೆ ಈ ಬಾರಿ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಲಿದ್ದು ಶ್ರದ್ಧೆ ಮತ್ತು ನಿಷ್ಠೆಯಿಂದ ನನ್ನನೂ ಸೇರಿ, ಪ್ರತಿ ಇಲಾಖೆ ಹಾಗೂ ಸ್ಥಳಿಯ ಸಾರ್ವಜನಿಕರು ಸ್ವಯಂ ಪ್ರೇರಣೆಯಿಂದ ಸೇವೆ ಸಲ್ಲಿಸಿ ಭಕ್ತರ ಪ್ರೀತಿ ಹಾಗೂ ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಶಾಸಕ ನೇಮಿರಾಜ್ ನಾಯ್ಕ ಸಭೆಯಲ್ಲಿ ಮನವಿ ಮಾಡಿದರು.
ಪಟ್ಟಣದ ಕೊಟ್ಟೂರೇಶ್ವರ ದೇವಸ್ಥಾನ ಮುಂಭಾಗ ಬುಧವಾರ ಧಾರ್ಮಿಕ ದತ್ತಿ ಇಲಾಖೆ ಫೆ.22ರಂದು ಜರುಗುವ ಕೊಟ್ಟೂರೇಶ್ವರ ಸ್ವಾಮಿಯ ರಥೋತ್ಸವ ಪ್ರಯುಕ್ತ ಹಮ್ಮಿಕೊಂಡ ಪೂರ್ವಬಾವಿ ಸಭೆಯಲ್ಲಿ ಮಾತನಾಡಿದರು. ರಥೋತ್ಸವಕ್ಕೆ ಜಾತ್ಯಾತೀತವಾಗಿ. ಪಕ್ಷಾತೀತವಾಗಿ ಭಕ್ತರು ಪಾದಯಾತ್ರೆ. ವಾಹನಗಳ ಮೂಲಕ ಆಗಮಿಸುತ್ತಾರೆ. ಕೊಟ್ಟೂರೇಶ್ವರ ಸ್ವಾಮಿ ಭಕ್ತರಾದ ಪಟ್ಟಣವಾಸಿಗಳು ಲವಲೇಷವೂ ಕುಂದುಂಟಾಗದಂತೆ ಸೇವೆ ಮಾಡಬೇಕು ಎಂದರು.
ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ದೇವಸ್ಥಾನದಂತೆ ಪಟ್ಟಣದ ಇನ್ನೊಂದು ದೇವಸ್ಥಾನ ಗಚ್ಚಿನಮಠ ಖಾಸಗಿ ಅವರ ಸುಪರ್ಧಿಯಲ್ಲಿದ್ದು ವರ್ಷಕ್ಕೆ ಕೋಟಿ ರೂ. ಆದಾಯವಿರುವ ಗಚ್ಚಿನಮಠವನ್ನು ಕೂಡಲೆ ಧಾರ್ಮಿಕ ದತ್ತಿ ಇಲಾಖೆ ವಶಪಡಿಸಿಕೊಳ್ಳುವಂತೆ ಭಕ್ತರೊಬ್ಬರು ಜಿಲ್ಲಾಧಿಕಾರಿಗೆ ಗಮನ ಸೆಳೆದರು. ಡಿಸಿ ಪ್ರತಿಕ್ರಿಯಿಸಿ ಒಂದು ಹಂತದ ಕ್ರಮ ನಡೆದಿದ್ದು. ಮುಖಂಡರೊಂದಿಗೆ ಚರ್ಚಿಸಿ ಉಳಿದ ಮಠಗಳನ್ನು ಖಂಡಿತ ಧಾರ್ಮಿಕ ಇಲಾಖೆ ವಶಪಡಿಸಿಕೊಳ್ಳಲಿದೆ ಎಂದು ಡಿ.ಸಿ. ಭರವಸೆ ನೀಡಿದರು.
ಕೊಟ್ಟೂರೇಶ್ವರ ಸ್ವಾಮಿ ದೇವಾಲಯದ ಮುಂದಿನ ಕಲ್ಯಾಣ ಮಂಟಪವನ್ನು ಧಾರ್ಮಿಕ ದತ್ತಿ ಇಲಾಖೆಯ ವಶಕ್ಕೆ ಪಡೆಯುವಂತೆ ಸಭೆಯಲ್ಲಿ ಕೇಳಿದ ಪ್ರಶ್ನೆಗೆ. ಎಂಎಂಜೆ ಹರ್ಷವರ್ಧನ್ ಪ್ರತಿಕ್ರಿಯಿಸಿ, ಈ ಕಲ್ಯಾಣ ಮಂಟಪದ ನಿರ್ದೇಶಕನಾಗಿ ನನಗೆ ಕಲ್ಯಾಣಮಂಟಪ ಧಾರ್ಮಿಕ ದತ್ತಿ ಇಲಾಖೆಗೆ ಸೇರಿಸಲು ಒಪ್ಪಿಗೆ ಇದೆ ಎಂದರು.
ಜಿಲ್ಲಾಧಿಕಾರಿ ಎಂ.ಎಸ್ ದಿವಾಕರ ಮಾತನಾಡಿ, ಕಲ್ಯಾಣ ಮಂಟಪದ ಅಧ್ಯಕ್ಷರು, ಸದಸ್ಯರ ಮನವೊಲಿಸಲು ಧಾರ್ಮಿಕ ದತ್ತಿ ಇಲಾಖೆ ಇಒ., ಸಹಾಯಕ >>4

### ಹಂಪಿಯಲ್ಲಿ ಶ್ರೀಪುರಂದರ ದಾಸರ ಆರಾಧನಾ ಮಹೋತ್ಸವ ಸಂಪನ್ನ

# ಆಧ್ಯಾತ್ಮಿಕ ಪರಂಪರೆಗೆ ಪುರಂದರ ದಾಸರ ಕೊಡುಗೆ ಅನನ್ಯ

■ ಹಂಪಿ ಟೈಮ್ಸ್ ಹೊಸಪೇಟೆ
ದಾಸ ಸಾಹಿತ್ಯ ಮತ್ತು ಸಂಗೀತ ಕ್ಷೇತ್ರದ ಮೂಲಕ ಆಧ್ಯಾತ್ಮಿಕ ಪರಂಪರೆಗೆ ಶ್ರೀಪುರಂದರ ದಾಸರು ಅನನ್ಯ ಕೊಡುಗೆ ನೀಡಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಸಿದ್ದಲಿಂಗೇಶ್ ರಂಗಣ್ಣನವರ್ ಹೇಳಿದರು.
ಹಂಪಿಯ ಶ್ರೀಪುರಂದರ ಮಂಟಪದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಂತ್ರಾಲಯ ಶ್ರೀರಾಘವೇಂದ್ರ ಸ್ವಾಮಿ ಮಠದ ಶ್ರೀಗುರುಸಾರ್ವಭೌಮ ದಾಸ ಸಾಹಿತ್ಯ ಪ್ರಾಜೆಕ್ಟ್ ಸಹಭಾಗಿತ್ವದಲ್ಲಿ ಏರ್ಪಡಿಸಿದ್ದ ಶ್ರೀಪುರಂದರದಾಸರ ಆರಾಧನಾ ಮಹೋತ್ಸವದಲ್ಲಿ ಪುರಂದರ ದಾಸರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಬುಧವಾರ ಮಾತನಾಡಿದರು, ಆರಾಧನಾ ಮಹೋತ್ಸವವನ್ನು ಹಂಪಿ, ಪಂಡರಾಪುರ, ತಿರುಮಲ ಮತ್ತು ಮಂತ್ರಾಲಯ ಸೇರಿದಂತೆ ದಕ್ಷಿಣ ಭಾರತದ ವಿವಿಧ ಭಾಗಗಳಲ್ಲಿ ಆರಾಧನೆಯನ್ನು ಆಚರಿಸಲಾಗುತ್ತದೆ. ಸಮಾಜಕ್ಕೆ ಪುರಂದರದಾಸರ ತತ್ವಾದರ್ಶಗಳು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ದಾಸರ ಸಂದೇಶಗಳು ಸರ್ವಕಾಲಿಕವಾಗಿವೆ ಎಂದರು.
ಬಳಿಕ ಮಧ್ಯಾರಾಧನೆ ಪ್ರಯುಕ್ತ ಶ್ರೀಪುರಂದರ ದಾಸರ ಮಂಟಪದಲ್ಲಿ, ದಾಸರ ರಾಯರ ಕಂಬಕ್ಕೆ ಬೆಳಿಗ್ಗೆ ವಿಶೇಷವಾಗಿ ಫಲ ಪಂಚಾಮೃತಾಭಿಷೇಕ, ಅರ್ಚನೆ, ವಿವಿಧ ಪುಷ್ಪಗಳಿಂದ ಹಾಗೂ ವಸ್ತ್ರಗಳಿಂದ ಅಲಂಕಾರ ನೆರವೇರಿಸಲಾಯಿತು. ಅಷ್ಟೋತ್ತರ, ಹರಿ ವಾಯುಸ್ತುತಿ ಪಾರಾಯಣ, ಭಜನಾ ಮಹಿಳೆಯ ರಿಂದ ಭಜನೆ, ಕೀರ್ತನೆ, ಕೋಲಾಟ ನೃತ್ಯ ಪ್ರದರ್ಶನ ನಡೆಯಿತು. ಪುರಂದರ ಮಂಟಪದಿಂದ ಶ್ರೀವಿಜಯ ವಿಠಲ ದೇವಸ್ಥಾನವರೆಗೆ ಶ್ರೀಪುರಂದರ ದಾಸರ ಭಾವಚಿತ್ರದೊಂದಿಗೆ ಮೆರವಣಿಗೆ ನಡೆಸಲಾಯಿತು.



ಪುರಂದರ ದಾಸರ ಕೀರ್ತನೆಗಳ ವಿಶೇಷ ಕುರಿತು ಮಂತ್ರಾಲಯ ಗುರುಸಾರ್ವಭೌಮ ದಾಸ ಸಾಹಿತ್ಯ ಪ್ರಾಜೆಕ್ಟ್ನ ವಿದ್ವಾನ್ ಸುಳಾದಿ ಹನುಮೇಶ್ ಆಚಾರ್ಯ ಉಪನ್ಯಾಸ ನೀಡಿದರು.
ರಾಜಮನೆತನದ ಆನೆಗುಂದಿಯ ಶ್ರೀಕೃಷ್ಣದೇವ ರಾಯರು, ಶ್ರೀರಾಘವೇಂದ್ರ ಸ್ವಾಮಿ ಮಠದ ಹೊಸಪೇಟೆ ವಿಭಾಗೀಯ ವ್ಯವಸ್ಥಾಪಕ ಗುರುರಾಜ್ ದಿಗ್ಗಾವಿ, ಮಠಾಧಿಕಾರಿ ಪವನ್ ಆಚಾರ್ಯ, ಅರ್ಚಕ ನರಸಿಂಹ ಆಚಾರ್ಯ, ಪ್ರಮುಖರಾದ ಶೀರೆಕೊಳ ಗುರುರಾಜ್, ಸಿಂಧನೂರು ದೇಸಾಯಿ, ಗುರುರಾಜ್ ಕುಲಕರ್ಣಿ, ಮಾರುತಿ ಆಚಾರ್ಯ ಇತರರಿದ್ದರು. ಮಂತ್ರಾಲಯ ಶ್ರೀರಾಘವೇಂದ್ರ ಸ್ವಾಮಿ ಮಠದ ಶ್ರೀಗುರುಸಾರ್ವಭೌಮ ದಾಸ ಸಾಹಿತ್ಯ ಪ್ರಾಜೆಕ್ಟ್ನ ಜಿಲ್ಲಾ ಸಂಯೋಜನ ಆನಂತ ಪದ್ಮನಾಭ ಕಾರ್ಯಕ್ರಮ ನಿರ್ವಹಿಸಿದರು.

## ಸ್ಟುಡೆಂಟ್ ಕಾಲಂ

# ನಾನೇ ದೊಡ್ಡವನೆಂದು ಬೀಗದಿರು



ಒಂದು ದಟ್ಟವಾದ ಕಾಡು ಅಲ್ಲೊಂದು ಮುದಿಗೂಬೆ ವಾಸವಾಗಿತ್ತು. ಅದು ದಿನ ಪೂರ್ತಿ ಕಣ್ಣು ಮುಚ್ಚಿ ನಿದ್ದೆ ಮಾಡುತ್ತಿತ್ತು. ಇತರ ಪ್ರಾಣಿಗಳು ಅದು ಚಿಂತನೆ ಮಾಡುತ್ತಿದೆ ಎಂದು ತಿಳಿದಿದ್ದವು. ಪ್ರಾಣಿಗಳು ತಮ್ಮ ತಮ್ಮಲ್ಲಿ ಜಗಳವಾದಾಗ ಅದರ ಬಳಿಗೆ ಹೋಗಿ ಪರಿಹಾರ ಕಂಡುಕೊಳ್ಳುತ್ತಿದ್ದವು. ಅದೇ ಕಾಡಿನಲ್ಲಿ ಆನೆ ಮತ್ತು ಮಂಗ ಬಹು ಪ್ರೀತಿಯ ಗೆಳೆಯರಾಗಿದ್ದರು. ಅವರಲ್ಲಿ ಒಂದು ಜಗಳ ಪ್ರಾರಂಭವಾಗಿ ತಾನು ದೊಡ್ಡವ ತಾನು ದೊಡ್ಡವನೆಂದು ಜಗಳ ಆಡುತ್ತಿದ್ದವು. ಕೊನೆಗೆ ಪರಿಹಾರಕ್ಕಾಗಿ ಗೂಬೆಯ ಬಳಿಗೆ ಬಂದವು. ಗೂಬೆಯು ಎಂದಿನಂತೆ ಕಣ್ಣು ಮುಚ್ಚಿ ಕುಳಿತಿತ್ತು. ಗೂಬೆಯ ಬಳಿ ತಮ್ಮ ಪ್ರಶ್ನೆ ಕೇಳಿದವು. ಆಗ ಗೂಬೆಯು "ನೀವು ಈ ಹೊಳೆ ದಾಟಿ ಆಚೆಗಿರುವ ಸೀಬೆ ಮರಕ್ಕೆ ಹೋಗಿ ಹಣ್ಣು ಕಿತ್ತು ತನ್ನಿರಿ"ಎಂದಿತು. ಆಗ ಮಂಗ ಮತ್ತು ಆನೆಗೆ ತಮ್ಮ ಪ್ರಶ್ನೆಗೆ ಮತ್ತು ಹಣ್ಣು ತರುವುದಕ್ಕೂ ಏನು ಸಂಬಂಧವೆಂದು ಕೇಳಿದವು. "ಮೊದಲು ಹಣ್ಣು ತನ್ನಿರಿ ಆಮೇಲೆ ಹೇಳುವೆನು" ಎಂದಿತು ಗೂಬೆ. ಆನೆ ಮತ್ತು ಮಂಗ ಎರಡು ಕೂಡಿ ಹೊರಟು ನದಿ ತೀರಕ್ಕೆ ಬಂದವು. ನದಿ ತುಂಬಿ ಹರಿಯುತ್ತಿತ್ತು ಮಂಗಕ್ಕೆ ತುಂಬಾ ಹೆದರಿಕೆಯಾಗಿ "ನನಗಂತೂ ಈ ನದಿ ದಾಟಲು ಆಗುವುದಿಲ್ಲ" ಎಂದಿತು. ಅದಕ್ಕೆ ಆನೆಯೂ "ನಾನು ಮೊದಲೇ ಹೇಳಿಲ್ಲವೇ ನಾನೇ ದೊಡ್ಡವನು" ಎಂದಿತು. ಮಂಗವು ಆನೆಯ ಮೇಲೆ ಕುಳಿತುಕೊಂಡಿತು ಎರಡು ಸೇರಿ ಆಚೆ ದಡಕ್ಕೆ ಬಂದವು.



ಆನೆಯು ಗಿಡವನ್ನು ಎಷ್ಟು ಅಲುಗಾಡಿಸಿದರೂ ಹಣ್ಣುಗಳು ಕೆಳಗೆ ಬೀಳಲೇ ಇಲ್ಲ. ಮಂಗವು ಸರಸರನೆ ಮರವೇರಿ ಹಣ್ಣು ಕಿತ್ತು ತಂದಿತು. ಎರಡು ಸೇರಿ ಗೂಬೆಯ ಬಳಿ ಬಂದವು. ಗೂಬೆಯು" ನೀವು ನದಿಯನ್ನು ಹೇಗೆ ದಾಟಿದಿರಿ" ಎಂದಿತು. ಅದಕ್ಕೆ ಆನೆಯೂ "ನಾನು ಮಂಗನನ್ನು ನನ್ನ ಮೈ ಮೇಲೆ ಕೂರಿಸಿಕೊಂಡು ಹೋದೆ ಇಲ್ಲದಿದ್ದರೆ ಈ ಹಣ್ಣುಗಳೆ ಸಿಗುತ್ತಿರಲಿಲ್ಲ" ಎಂದಿತು. ಮುಂದೆ "ಆ ಹಣ್ಣುಗಳನ್ನು ಯಾರು ಕಿತ್ತರು"ಎಂದಿತು ಗೂಬೆ. ಆಗ ಮಂಗವು "ನಾನೇ ಗಿಡವೇರಿ ಹಣ್ಣು ಕಿತ್ತೆ ಇಲ್ಲವಾದರೆ ಹಣ್ಣುಗಳು ಸಿಗುತ್ತಿರಲಿಲ್ಲ "ಎಂದು ಸುಮ್ಮನಾಯ್ತು. ಗೂಬೆಯು ಸ್ವಲ್ಪ ಹೊತ್ತು ವಿಚಾರ ಮಾಡಿ ಆಮೇಲೆ "ನೀವಿಬ್ಬರೂ ಒಬ್ಬರಿಗೊಬ್ಬರು ಬೇಕೇ ಬೇಕು ಇಲ್ಲವಾದರೆ ಯಾವುದೇ ಕೆಲಸ ಸಾಧ್ಯವೇ ಇಲ್ಲ. ಇಲ್ಲಿ ಯಾರು ದೊಡ್ಡವರಲ್ಲ ಸಣ್ಣವರಲ್ಲಎಂದು ಬುದ್ಧಿ ಹೇಳಿತು.

**ನೀತಿ:** "ಜಗತ್ತಿನಲ್ಲಿ ಯಾರು ದೊಡ್ಡವರಲ್ಲ ಚಿಕ್ಕವರಲ್ಲ ಎಲ್ಲರೂ ಒಂದೇ ಒಬ್ಬೊಬ್ಬರಿಗೊಂದು ವಿಶೇಷ ಬುದ್ಧಿ, ಶಕ್ತಿ ಇರುತ್ತದೆ. ಆದ್ದರಿಂದ ಎಲ್ಲರೂ ಒಂದೇ ಎಂದು ತಿಳಿಯಬೇಕು". ಸ್ನೇಹ ಎಂಬುದು ಅಮೂಲ್ಯ

**H k ವೇದಪ್ರಿಯ, 10ನೇ ತರಗತಿ**
**ಸರಕಾರಿ ಪದವಿಪೂರ್ವ ಕಾಲೇಜ್ ಪ್ರೌಢಶಾಲಾ ವಿಭಾಗ**
**ಚಿತ್ತವಾಡಗಿ ಹೊಸಪೇಟೆ**

ಹಂಪಿ ಟೈಮ್ಸ್
ಕನ್ನಡ ಡಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

## ವಿಜಯನಗರ ಜಿಲ್ಲೆಯ ಕೂಡ್ಲಿಗಿಯ ಹೆಮ್ಮೆ

# ಗಾಂಧೀ ಚಿತಾಭಸ್ಮ ಸ್ಮಾರಕ

ಭಾರತದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಪವಿತ್ರವಾದ ಚಿತಾಭಸ್ಮ ಸ್ಮಾರಕ ನಮ್ಮ ವಿಜಯನಗರ ಜಿಲ್ಲೆಯ ಕೂಡ್ಲಿಗಿಯಲ್ಲಿರುವುದು ಹೆಮ್ಮೆಯ ವಿಷಯುವಾಗಿದೆ.

ಪವಿತ್ರ ಗಾಂಧಿ ಚಿತಾಭಸ್ಮವನ್ನು ನಮ್ಮ ಕೂಡ್ಲಿಗಿಗೆ ತಂದ ಇತಿಹಾಸವನ್ನು ಕೇಳಿದರೆ ಮೈ ರೋಮಾಂಚನಗೊಳ್ಳುತ್ತದೆ . ಅಂದಿನ ಮದ್ರಾಸ್ ಪ್ರಾಂತ್ಯದ ಕಂದಾಯ ಮಂತ್ರಿಗಳಾಗಿದ್ದ ಹಾಲಹರವಿ ಸೀತಾರಾಮರೆಡ್ಡಿ ಅವರ ಪರಿಶ್ರಮದಿಂದ, ಆಗಿನ ಬೋರ್ಡ್ ಹೈಸ್ಕೂಲಿನ ಗುರುಗಳೂ, ಈ ಭಾಗದ ಸ್ವಾತಂತ್ರ್ಯಯೋಧರೂ ಆಗಿದ್ದ ಬಿಂದು ಮಾಧವರವರು ಇತರೆ ಗಣ್ಯ ವ್ಯಕ್ತಿಗಳ ಸಹಾಯ, ಸಹಕಾರ ದೊಂದಿಗೆ ಗಂಧದ ಕರಂಡಕದಲ್ಲಿದ್ದ ಗಾಂಧಿ ಚಿತಾಭಸ್ಮವನ್ನು ಬಳ್ಳಾರಿಗೆ ತಂದು, 1948ರ ಫೆಬ್ರವರಿ 11 ರಂದು ಬಳ್ಳಾರಿಯ ಮಲ್ಲಸಜ್ಜನ ವ್ಯಾಯಾಮ ಶಾಲೆಯಲ್ಲಿ ಸಾರ್ವಜನಿಕರ ವೀಕ್ಷಣೆಗೆ ಇರಿಸಿದ್ದರು. ನಂತರ ಬಳ್ಳಾರಿ ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷರೂ, ಹಿರಿಯ ಕಾಂಗ್ರೆಸ್ ನಾಯಕರೂ, ಸ್ವಾತಂತ್ರ್ಯ ಹೋರಾಟಗಾರರೂ, ಲೋಕಸಭಾ ಸದಸ್ಯರೂ ಆಗಿದ್ದ ಟೇಕೂರು ಸುಬ್ರಹ್ಮಣ್ಯಂರವರ ನೇತೃತ್ವದಲ್ಲಿ ಸಾವಿರಾರು ಜನ ಗಾಂಧಿ ಚಿತಾಭಸ್ಮವನ್ನು ಕೂಡ್ಲಿಗಿಗೆ ಮೆರವಣಿಗೆಯಲ್ಲಿ ತಂದರು.


ಮೆರವಣಿಗೆ ನಂತರ ಹಿರಿಯ ಸ್ವಾತಂತ್ರ ಹೋರಾಟಗಾರರಾದ ಬಿಂದು ಮಾಧವ ಅವರು ಮತ್ತು ಮುಂತಾದ ಹಿರಿಯರ ಆಗ್ರಹದಂತೆ ಕೂಡ್ಲಿಗಿಯ ಸರಕಾರಿ ಪ್ರೌಢಶಾಲೆ ಆವರಣದಲ್ಲಿ ವಿದ್ಯಾರ್ಥಿಗಳ ಸಹಾಯದಿಂದ ಸ್ಮಾರಕ ರೂಪದ ಕಟ್ಟೆಯನ್ನು ನಿರ್ಮಿಸಿ ಚಿತಾಭಸ್ಮವನ್ನು ಕೆಲಕಾಲದವರೆಗೆ ಸಾರ್ವಜನಿಕರ ದರ್ಶನಕ್ಕಿಡಲಾಯಿತು.1950 ಜನವರಿ 30 ರಂದು ವಿದ್ಯಾರ್ಥಿಗಳಿಂದಲೇ ಪುನರ್ ನಿರ್ಮಿತವಾದ ಕಟ್ಟೆಯ ಮೇಲೆ ಚಿತಾಭಸ್ಮವನ್ನು ಪ್ರತಿಷ್ಠಾಪಿಸಿದವರು ಹೈದರಾಬಾದ್ ಕಾಂಗ್ರೆಸ್ ಅಧ್ಯಕ್ಷರೂ, ಲೋಕಸಭಾ ಸದಸ್ಯರೂ ಆಗಿದ್ದ ರಮಾನಂದ ತೀರ್ಥರು.




ಶೇಖರಯ್ಯ ಟಿ ಎಚ್ ಎಂ
ಶಿಕ್ಷಕರು, ಕೂಡ್ಲಿಗಿ

Scan For Digital Colourful
HAMPI TIMES E-paper

ಅನೇಕ ಗಣ್ಯರು, ಮಹನೀಯರು ಈ ಪವಿತ್ರ ಸ್ಥಳಕ್ಕೆ ಭೇಟಿ ನೀಡಿ, ಇದನ್ನೊಂದು ಸ್ಮಾರಕವನ್ನಾಗಿ ರೂಪಿಸಲು ನೆರವಾಗಿದ್ದಾರೆ. ಮೈಸೂರು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯ ನವರು ಬಾಪೂಜಿಯವರ ಚಿತಾಭಸ್ಮಕ್ಕೆ ನಮನ ಸಲ್ಲಿಸಲು ಭೇಟಿ ನೀಡಿದ್ದಾಗ,ಚಿತಾಭಸ್ಮದ







ಅಭಿವೃದ್ಧಿಗಾಗಿ, ಒಂದು ಮಂಟಪದ ನಿರ್ಮಾಣಕ್ಕಾಗಿ ಸರ್ಕಾರದಿಂದ ಧನ ಸಹಾಯವನ್ನು ಒದಗಿಸಿದ್ದರು.

ತರುವಾಯ ಅಖಿಲ ಭಾರತ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿದ್ದ ಆರ್ ಆರ್ ದಿವಾಕರ್ ಅವರು 1957ನೇ ಏಪ್ರಿಲ್ 6ರಂದು ಅಮೃತಶಿಲೆಯಿಂದ ನಿರ್ಮಿಸಲಾದ ಕಟ್ಟೆಯ ಮಧ್ಯದಲ್ಲಿ ಚಿತಾಭಸ್ಮವಿದ್ದ ಪೆಟ್ಟಿಗೆಯನ್ನು ವಿಧಿವತ್ತಾಗಿ ಪ್ರತಿಷ್ಠಾಪಿಸಿದರು. ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರಾಗಿದ್ದ ರಾಮರಾವ್ ಹುಕ್ಕೇರಿ ಅವರು ಈ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು.

ಅಂದಿನ ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ದೇವರಾಜ್ ಅರಸುರವರು ಕೂಡ್ಲಿಗಿಗೆ ಭೇಟಿ ನೀಡಿದ್ದಾಗ, ಚಿತಾಭಸ್ಮದ ಇತಿಹಾಸವನ್ನು ಕೇಳಿ ₹ 50,000 ಧನಸಹಾಯವನ್ನು ಒದಗಿಸಿದ್ದರು. ಇದರ ನೆರವಿನಿಂದ ಚಿತಾಭಸ್ಮಕ್ಕೆ ಮೇಲ್ಛಾವಣಿ ಹೊಂದಿದ ಭವ್ಯ ಮಂಟಪನಿರ್ಮಾಣವಾಯಿತು.ಈಎಲ್ಲಾಪ್ರಕ್ರಿಯೆಯನ್ನೂ,ಇತಿಹಾಸದ ದಾಖಲೆ ಪತ್ರಗಳನ್ನು ಒಂದು ಲೋಹದ ಪೆಟ್ಟಿಗೆಯಲ್ಲಿಟ್ಟು ಮೊಹರು ಮಾಡಿ,ಅದನ್ನು ಕೂಡ್ಲಿಗಿ ಗಾಂಧಿ ಸ್ಮಾರಕ ಸಮಿತಿಯ ಅಧ್ಯಕ್ಷರಾಗಿದ್ದ ಜಿ ಕೆ ವೆಂಕೋಬರಾವ್ ಅವರಿಗೆ ವಹಿಸಲಾಯಿತು. ಇವರ ನಿಧನಾ ನಂತರ ಅಂಗಡಿ ಸಿದ್ದಣ್ಣನವರು ಗಾಂಧಿ ಸ್ಮಾರಕ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಪ್ರಸ್ತುತ ನಿವೃತ್ತ ದೈಹಿಕ ಶಿಕ್ಷಕರಾದ ಶ್ರೀ ಡಿ. ನಾಗರಾಜ್ ಇವರು ಗಾಂಧಿ ಸ್ಮಾರಕ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಈ ಐತಿಹಾಸಿಕ ಪವಿತ್ರ ಸ್ಮಾರಕಕ್ಕೆ, ಭಾರತದ ಉಕ್ಕಿನ ಮಹಿಳೆ ಎಂದೇ ಹೆಸರಾಗಿದ್ದ ಪ್ರಧಾನಮಂತ್ರಿಗಳಾಗಿದ್ದ ಶ್ರೀಮತಿ ಇಂದಿರಾ ಗಾಂಧಿ, ಭಾರತದ ಪ್ರಥಮ ಸೇನಾ ದಂಡ ನಾಯಕ ಜನರಲ್ ಕೆ ಎಂ ಕಾರ್ಯಪ್ಪ, ಮದ್ರಾಸ್ ಪ್ರಾಂತ್ಯದ ಮಂತ್ರಿಗಳಾಗಿದ್ದ ಡಾ. ಆರ್ ನಾಗನಗೌಡ, ಮೈಸೂರು ಪ್ರಾಂತ್ಯದ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಎಸ್. ಚೆನ್ನಯ್ಯ, ಮುಖ್ಯಮಂತ್ರಿಗಳಾಗಿದ್ದ ಎಸ್ ನಿಜಲಿಂಗಪ್ಪ ರಾಮಕೃಷ್ಣ ಹೆಗಡೆ, ಕೇಂದ್ರದ ಆರೋಗ್ಯ ಸಚಿವರಾಗಿದ್ದ ಡಿ ಪಿ ಕರ್ಮಾಕರ್, ಕಂದಾಯಮಂತ್ರಿಗಳಾಗಿದ್ದ ಕಡಿದಾಳ್ ಮಂಜಪ್ಪ, ವಿದ್ಯಾ ಮಂತ್ರಿಗಳಾಗಿದ್ದ ಸಿ.ವೆಂಕಟಪ್ಪ, ರಾಜ್ಯಪಾಲರಾಗಿದ್ದ ಮೋಹನ್ ಲಾಲ್ ಸುಖಾಡಿಯ, ಪದ್ಮಭೂಷಣ ಡಾ. ಎಂ ಸಿ ಮೋದಿ, ದೇವುಡು ನರಸಿಂಹಶಾಸ್ತ್ರಿ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಕುಮಾರಸ್ವಾಮಿ, ಪ್ರಸ್ತುತ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯ ಹೀಗೆ ಅನೇಕ ಜನ ಗಣ್ಯರು ಚಿತಾಭಸ್ಮಕ್ಕೆ ಭೇಟಿ ನೀಡಿರುವರು.

ಪ್ರತಿವರ್ಷವೂ ಹುತಾತ್ಮರ ದಿನದಂದು ಇಲ್ಲಿ ವಿಶೇಷವಾದ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಈ ಸ್ಥಳದ ವಿಶೇಷವೆಂದರೆ, ತಾಲೂಕಿನ ಯಾವುದೇ ಸಂಘಟನೆಗಳ ಹೋರಾಟ, ಪಕ್ಷಗಳ ಕಾರ್ಯಕ್ರಮಗಳು, ಚಳುವಳಿಗಳು ರೂಪುಗೊಳ್ಳು ವುದು ಈ ಸ್ಥಳದಿಂದಲೇ. ಇತ್ತೀಚೆಗೆ ಈ ಸ್ಥಳದಲ್ಲಿ, ಗಾಂಧಿ ಸ್ಮಾರಕ ಸಮಿತಿ, ಮೈದಾನ ಗೆಳೆಯರ ಬಳಗ, ಜೆಸಿಐ ಕೂಡ್ಲಿಗಿ ಗೋಲ್ಡನ್ ಮತ್ತು ಇತರ ಎಲ್ಲಾ ಸಮಾನ ಮನಸ್ಕರ ಒತ್ತಾಸೆಯಿಂದ 'ಚಿಂತನ ಚೇತನ' ಕಾರ್ಯಕ್ರಮದ ಮೂಲಕ ಜ್ಞಾನಪ್ರಸಾರವಾಗುತ್ತಿದೆ.ಇಂತಹ ಪವಿತ್ರ ಚಿತಾಭಸ್ಮವಿರುವ ಸ್ಮಾರಕಕ್ಕೆ ನೀವೂ ಒಮ್ಮೆ ಭೇಟಿ ನೀಡಿ.

# ಭವಿಷ್ಯದ ಐದು ವರ್ಷಗಳಲ್ಲಿ....

■ ವೀಣಾ ಹೇಮಂತ್ ಗೌಡ ಪಾಟೀಲ್ ಮುಂಡರಗಿ ಗದಗ



ಅತ್ಯಂತ ಸಂಭ್ರಮದಿಂದ ಆಚರಿಸ ಬೇಕಾಗಿದ್ದ ತನ್ನ 25ನೇ ಹುಟ್ಟುಹಬ್ಬದ ದಿನ ಆ ಯುವಕ ಅಸಂತೃಪ್ತಿಯಿಂದ ಬಳಲುತ್ತಾ ಕುಳಿತಿದ್ದ. ಆತನಿಗೆ ಅತಿ ದೊಡ್ಡ ಕನಸುಗಳಿದ್ದವಾದರೂ ಆತನ ಕೆಟ್ಟ ಚಟಗಳು ಆತನ ದಿನದ ಬಹುಪಾಲನ್ನು ನುಂಗಿ ಹಾಕುತ್ತಿದ್ದವು. ಈ ಕುರಿತು ಬಹಳವೇ ಯೋಚಿಸುತ್ತಿದ್ದ ಆತನಿಗೆ ಪರಿಹಾರ ಮಾತ್ರ ದೊರೆತಿರಲಿಲ್ಲ... ಇದು ಆತನನ್ನು ಮತ್ತಷ್ಟು ಉದಾಸೀನನನ್ನಾಗಿ ಮಾಡಿತ್ತು.

ಆತನ ಅನ್ಯ ಮನಸ್ಥಿತಿಯನ್ನು ಗಮನಿಸಿದ ಆತನ ಪ್ರೀತಿಯ ಅಜ್ಜ ಆತನಿಗೆ ಸರಳವಾದ ಆದರೆ ಅಷ್ಟೇ ಶಕ್ತಿಯುತವಾದ ಸಲಹೆಯೊಂದನ್ನು ಆತನಿಗೆ ನೀಡಿದ... "ಮುಂದಿನ ಐದು ವರ್ಷಗಳಲ್ಲಿ ನೀನು ಏನಾಗುವೆ ಎಂಬುದನ್ನು ನೀನು ಓದುವ ಪುಸ್ತಕಗಳು, ನಿನ್ನ ಜೊತೆಗಾರರು, ನೀನು ರೂಢಿಸಿಕೊಂಡ ಅಭ್ಯಾಸಗಳು, ನೀನು ಹೂಡಿಕೆ ಮಾಡುವ ಹಣ ಮತ್ತು ನಿನ್ನ ಬೆಳವಣಿಗೆಗಾಗಿ ನೀನು ಮಾಡುವ ತ್ಯಾಗಗಳು ನಿನ್ನ ಬದುಕಿನ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ" ಎಂದು ಆತ ಹೇಳಿದ.

ತನ್ನಜ್ಜ ಹೇಳಿದ ಈ ಮಾತುಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ ಆತ ತನ್ನ ಜೀವನಶೈಲಿಯನ್ನು ಬದಲಾಯಿಸಿಕೊಂಡು ತನ್ನ ಭವ್ಯ ಭವಿಷ್ಯದ ಸಾಧನೆಯ ಗುರಿಯತ್ತ ಗಮನವನ್ನು ಕೇಂದ್ರೀಕರಿಸಿ ಅದಕ್ಕೆ ಪೂರಕವಾಗಿ ಕಾರ್ಯನಿರ್ವಹಿಸಲಾರಂಭಿಸಿದ.

ಆತನ ಅಜ್ಜ ಹೇಳಿದ, ನೀನು ಓದಿದ ಪುಸ್ತಕಗಳು

ಆತ ಪುಸ್ತಕಗಳನ್ನು ಓದಲೆಂದೇ ಪ್ರತಿದಿನ ರಾತ್ರಿ ಕೆಲ ಸಮಯವನ್ನು ಮೀಸಲಾಗಿಟ್ಟ. ಮೊದಮೊದಲು ಲಘು ಕಾದಂಬರಿಗಳನ್ನು ಓದಲು ಆರಂಭಿಸಿದ ಆತ ನಿಧಾನವಾಗಿ ಜೀವನದ ಕುರಿತಾದ ವಿಭಿನ್ನ ಒಳನೋಟಗಳನ್ನು ಹೊಂದಿರುವ ಪುಸ್ತಕಗಳನ್ನು ಓದಲಾರಂಭಿಸಿದ. ನಾಯಕತ್ವ ಗುಣ,ಆರ್ಥಿಕ, ಸಾಮಾಜಿಕ ಮತ್ತು ವೈಯುಕ್ತಿಕ ಬೆಳವಣಿಗೆಗೆ ಅವಶ್ಯಕವಾದ ವ್ಯಕ್ತಿತ್ವ ವಿಕಸನದ ಪುಸ್ತಕಗಳು ಆತನ ಜ್ಞಾನದ ಹರಹನ್ನು ಹೆಚ್ಚಿಸಿದವು.ಮತ್ತಷ್ಟು ಅದ್ಭುತ ನಿರ್ಣಯಗಳನ್ನು ಕೈಗೊಳ್ಳುವ ಮತ್ತು ಪಾಲಿಸುವ ಮೂಲಕ ಜೀವನವನ್ನು ಅದ್ಭುತವಾಗಿ ಕಟ್ಟಿಕೊಳ್ಳಬಹುದು ಎಂಬ ಪುಸ್ತಕದಲ್ಲಿನ ಸೂಕ್ತಿಯೊಂದು ಆತನಿಗೆ ಸ್ಫೂರ್ತಿಯನ್ನು ತುಂಬಿ ಅಂತಹ ಸೂಕ್ತಿಗಳನ್ನು ಆತ ಬರೆದುಕೊಂಡು ಅವುಗಳನ್ನು ಬದುಕಿನಲ್ಲಿ ಪಾಲಿಸಲು ಆರಂಭಿಸಿದ. ಆತನ ಚಿಂತನೆಗಳ ಪರಿಣಾಮವಾಗಿ ಕೇವಲ ಒಂದೇ ವರ್ಷದಲ್ಲಿ ಆತ ಜ್ಞಾನ ಸಂಪತ್ತನ್ನು, ವೈಚಾರಿಕತೆಯನ್ನು ಹೊಂದಿದ ಹೊಸ ಮನುಷ್ಯನಾಗಿ ಪರಿವರ್ತಿತನಾಗಿದ್ದ.

ಆತ ಉಣ್ಣುವ ಆಹಾರ.... ಇದುವರೆಗೂ ತಾನು ಸೇವಿಸುತ್ತಿದ್ದ ಆಹಾರವನ್ನು ತ್ಯಜಿಸಿದ ಆತ ಒಳ್ಳೆಯ ಆರೋಗ್ಯಕರ ಆಹಾರಕ್ಕೆ ಆದ್ಯತೆ ನೀಡಿ ತಾನೇ ಅಡುಗೆ ಮಾಡಲು ಆರಂಭಿಸಿದ. ಪೋಷಕಾಂಶಯುಕ್ತ ಆಹಾರ ಆತನ ದೇಹಕ್ಕೆ ಅತ್ಯಗತ್ಯ ಎಂಬುದನ್ನರಿತ ಆತ ಆಹಾರದಲ್ಲಿ ಕೈಗೊಂಡ ಬದಲಾವಣೆ ತನ್ನ ಬದುಕಿನಲ್ಲಿ ಬೀರಿದ ಧನಾತ್ಮಕ ಪರಿಣಾಮದಿಂದಾಗಿ ಆರೋಗ್ಯವಂತ ಶರೀರವೇ ತನ್ನ ಅತಿ ದೊಡ್ಡ ಅಸ್ತ್ರ ಎಂದು ತಿಳಿದು ಹಣ್ಣು,ತರಕಾರಿಗಳು ಮತ್ತು ಪ್ರೋಟೀನ್ ಭರಿತ ಆಹಾರವನ್ನು ತನ್ನ ದೈನಂದಿನ ಊಟದಲ್ಲಿ ಬಳಸಲಾರಂಭಿಸಿದ. ಸತ್ವಯುತವಾದ ಆಹಾರ ಆತನ ಚೈತನ್ಯವನ್ನು ಹೆಚ್ಚಿಸಿ ಮುಖದ ಹೊಳಪು ಮತ್ತು ದೇಹದ ಕಾಂತಿಯನ್ನು ಕೂಡ ಹೆಚ್ಚಿಸಿತು. ಸಾತ್ವಿಕ ಆಹಾರವು ಮಾನಸಿಕವಾಗಿ ಶಾಂತಿಯನ್ನು ಹೆಚ್ಚಿಸಿ ಆತನಲ್ಲಿ ದೈಹಿಕ ಬಲವನ್ನು ತುಂಬಿತು.

ಆತನ ಹವ್ಯಾಸಗಳು.... ಒಳ್ಳೆಯ ಹವ್ಯಾಸಗಳನ್ನು ಹೊಂದುವುದು ಮೊದಮೊದಲು ತುಸು ಕಷ್ಟ ಎಂದೆನಿಸಿದರೂ ಆತ ಒಳ್ಳೆಯ ಹವ್ಯಾಸಗಳನ್ನು ರೂಢಿಸಿಕೊಳ್ಳುವಲ್ಲಿ ಪುಟ್ಟ ಪುಟ್ಟ ಹೆಜ್ಜೆಗಳನ್ನು ಇರಿಸಲಾರಂಭಿಸಿದ. ನಸುಕಿನ ಜಾವದಲ್ಲಿಯೇ ಏಳಲಾರಂಭಿಸಿದ ಆತ ತನ್ನ ಆ ದಿನದ ಗುರಿಗಳನ್ನು ಒಂದು ಪುಸ್ತಕದಲ್ಲಿ ಬರೆಯುತ್ತಿದ್ದ. ಪ್ರತಿ ಮುಂಜಾನೆ ಕೃತಜ್ಞತಾಪೂರ್ವಕವಾಗಿ ದೇವರನ್ನು ನೆನೆಯುತ್ತಿದ್ದ ಆತ ಒಳ್ಳೆಯ ಹವ್ಯಾಸಗಳನ್ನು ಒಂದೊಂದಾಗಿ ತನ್ನದಾಗಿಸಿಕೊಂಡ. ದೈನಂದಿನ ಆತನ ವ್ಯಾಯಾಮ, ನಡಿಗೆಗಳು ಆತನ ಮನಸ್ಸನ್ನು ಉಲ್ಲಸಿತವಾಗಿರಿಸಲು, ಮತ್ತು ಬದುಕಿನಲ್ಲಿ ಕ್ರಮಬದ್ಧತೆಯನ್ನು ತರಲು ಸಹಾಯಕವಾದವು. ಕೆಲವೇ ದಿನಗಳಲ್ಲಿ ಆತನ ಒಳ್ಳೆಯ ಹವ್ಯಾಸಗಳು ಆತನ ದೈನಂದಿನ ಬದುಕಿನ ಅತ್ಯವಶ್ಯಕ ಕ್ರಿಯೆಗಳಾದವು.ಇದು ಆತನಲ್ಲಿ ಹೆಚ್ಚಿನ ಶಿಸ್ತನ್ನು, ಸಮರ್ಪಕತೆಯನ್ನು ಮತ್ತು ಉತ್ಪಾದಕತೆಯನ್ನು ಹೆಚ್ಚಿಸಿತ್ತು...

ಪರಿಣಾಮವಾಗಿ ಈ ಹಿಂದೆ ಮಾಡಲಸಾಧ್ಯವೆನಿಸಿದ ಎಷ್ಟೋ ಕೆಲಸಗಳು ಲೀಲಾಜಾಲವಾಗಿ ಆತನಿಂದ ಮಾಡಲ್ಪಟ್ಟವು. ಆತನ ಸ್ನೇಹ ಬಳಗ... ಆತ ತನ್ನ ಬಿಡುವಿನ ಸಮಯವನ್ನು ಕಳೆಯುತ್ತಿದ್ದ ಸ್ನೇಹ ಬಳಗದಲ್ಲಿ ಕೇವಲ ಹಾಳು ಹರಟೆಯಲ್ಲಿ ಬದುಕನ್ನು ಕಳೆಯುವವರಿದ್ದರು. ತನ್ನ ಬದುಕಿಗೆ ಸ್ಫೂರ್ತಿಯನ್ನೀಯುವ ಮತ್ತು ತನ್ನ ಬೆಂಬಲದಿಂದ ಬದುಕನ್ನು ಉನ್ನತಗೊಳಿಸಿಕೊಳ್ಳುವ ಸ್ನೇಹಿತರ ವಲಯದಲ್ಲಿ ತನ್ನನ್ನು ತಾನು ಗುರುತಿಸಿಕೊಂಡ ಆತ ತನ್ನ ಗುರಿಯೆಡೆಗೆ ಮತ್ತಷ್ಟು ವೇಗದಿಂದ ಸಾಗತೊಡಗಿದ. ಪರಿಣಾಮವಾಗಿ ಆತನ ಹೊಸ ಸ್ನೇಹಿತರ ಬಳಗ ಆತನ ಅಭಿವೃದ್ಧಿಗೆ ಕಾರಣವಾಯಿತು.ಪರಸ್ಪರ ಸ್ಪರ್ಧಾ ಸ್ಫೂರ್ತಿಯಿಂದ ಅವರೆಲ್ಲರೂ ತಮ್ಮ ಹೊಸ ಸವಾಲುಗಳನ್ನು ಎದುರಿಸಲು ಸಿದ್ಧರಾಗಿ ಯಶಸ್ಸಿನೆಡೆ ಮುನ್ನಡೆದರು.

ಆತನ ದೈಹಿಕ ಅಂಗಸಾಧನೆ.... ಮೊದಮೊದಲು ಸ್ನೇಹಿತರೊಂದಿಗೆ ಒಂದೆರಡು ಕಿಲೋಮೀಟರ್ ನಡೆಯಲು ಪ್ರಯತ್ನಿಸುತ್ತಿದ್ದ ಆತ ನಡಿಗೆಯ ಮಹತ್ವಗಳನ್ನು ಅರಿತುಕೊಂಡ. ವ್ಯಾಯಾಮ ಬದುಕಿನಲ್ಲಿ ತುಂಬುವ ಹುಮ್ಮಸ್ಸಿನಿಂದ ಉತ್ತೇಜಿತನಾದ ಆತ ತನ್ನ ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ವ್ಯಾಯಾಮ ಶಾಲೆಗೆ ಸೇರಿಕೊಂಡ... ಪರಿಣಾಮವಾಗಿ ಹೆಚ್ಚಿದ ದೈಹಿಕ ಸಾಮರ್ಥ್ಯದಿಂದ ಆತ ಮತ್ತಷ್ಟು ಆತ್ಮವಿಶ್ವಾಸವನ್ನು ಪಡೆದುಕೊಂಡ.

ಆತ ಹೂಡಿಕೆ ಮಾಡುವ ಹಣ... ತನ್ನ ಓದುವಿಕೆಯ ಮೂಲಕ ವಾಣಿಜ್ಯಾತ್ಮಕ ವಿಷಯಗಳ ಕುರಿತು ಅಪಾರ ಜ್ಞಾನವನ್ನು ಸಂಪಾದಿಸಿದ ಆತ ಎಲ್ಲೆಲ್ಲಿ ಹಣವನ್ನು ಹೂಡಿದರೆ, ಉಳಿತಾಯ ಮಾಡಿದರೆ ಲಾಭದಾಯಕ ಎಂಬುದನ್ನು ಅರಿತಿದ್ದು ಅದರಂತೆ ಹೂಡಿಕೆ ಮಾಡಿದನು. ಆರ್ಥಿಕ ವ್ಯವಹಾರಗಳ ನಿರ್ವಹಣೆಯನ್ನು ಮಾಡುವ ತರಬೇತಿಗೆ ಹಾಜರಾಗಿ ತನ್ನ ವಾಣಿಜ್ಯ ಜ್ಞಾನವನ್ನು ವಿಸ್ತರಿಸಿಕೊಂಡು ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಂಡನು. ಪರಿಣಾಮವಾಗಿ ಮುಂದಿನ ಐದು ವರ್ಷಗಳಲ್ಲಿ ಆತನಲ್ಲಿ ಸಾಕಷ್ಟು ಗಳಿಕೆಯ ಹಣದ ಜೊತೆಗೆ ಉಳಿಕೆಯ ಹಣವು ಇದ್ದು ಅದು ಆತನಿಗೆ ಪಾರ್ಶ್ವ ಆದಾಯಕ್ಕೆ ದಾರಿ ಮಾಡಿಕೊಟ್ಟಿತು.

ಪರಿಣಾಮವಾಗಿ ಆತ ತನ್ನ ಗುರಿಯನ್ನು ಮುಟ್ಟಲು ಬೇಕಾಗುವ ಓದು, ಪ್ರಯಾಣ ಮುಂತಾದ ಖರ್ಚು ವೆಚ್ಚಗಳಿಗೆ ಸಾಕಷ್ಟು ಹಣವನ್ನು ಹೊಂದಿದ್ದ.

ಆತ ಮಾಡುವ ತ್ಯಾಗಗಳು... ಉನ್ನತ ಯಶಸ್ಸಿಗೆ ಬೇಕಾಗುವುದು ಕೇವಲ ಬದ್ಧತೆ ಮತ್ತು ನಿರಂತರ ಪರಿಶ್ರಮ ಮಾತ್ರವಲ್ಲ ಅದರ ಜೊತೆಗೆ ಕೆಲ ಅನವಶ್ಯಕ ವಸ್ತು ಮತ್ತು ವಿಷಯಗಳನ್ನು ತ್ಯಾಗ ಮಾಡುವುದು ಎಂಬುದು ಈಗಾಗಲೇ ಆತನಿಗೆ ಅರಿವಾಗಿತ್ತು. ಆತ ದುಬಾರಿ ವೆಚ್ಚದ ಮೋಜಿನ ಔತಣ ಕೂಟಗಳಿಗೆ ಹೋಗುವುದನ್ನು ನಿಲ್ಲಿಸಿದ, ಸಾಮಾಜಿಕ ಜಾಲತಾಣಗಳಲ್ಲಿ ತನ್ನ ಹೆಚ್ಚಿನ ಸಮಯ ಸೋರಿ ಹೋಗುವುದನ್ನು ಗಮನಿಸಿ ಅಲ್ಲಿಯೂ ಕೂಡ ಇಂತಿಷ್ಟೇ ಸಮಯ ಎಂದು ಕಟ್ಟುನಿಟ್ಟಾಗಿ ಸಮಯದ ಮಿತಿ ಹಾಕಿಕೊಂಡು ಅವುಗಳನ್ನು ಬಳಸಲಾರಂಭಿಸಿದ. ಮೊದಮೊದಲು ತನಗೆ ತಾನು ಹಾಕಿಕೊಳ್ಳುವ ಈ ರೀತಿಯ ಮಿತಿಗಳನ್ನು ಪಾಲಿಸಲು ಸಾಕಷ್ಟು ಕಿರಿಕಿರಿ ಎನ್ನಿಸಿದರೂ ಕೂಡ ಗುರಿ ಸಾಧನೆಗೆ ಈ ತ್ಯಾಗಗಳನ್ನು ಮಾಡುವುದು ಅತ್ಯವಶ್ಯಕ ಎಂಬ ಉದ್ದೇಶದಿಂದ ಆ ಕಿರಿಕಿರಿಗಳನ್ನು ಪರಿಗಣನೆಗೆ ತೆಗೆದುಕೊಳ್ಳದೇ ಧನಾತ್ಮಕ ಮತ್ತು ಮೌಲ್ಯವರ್ಧಿತ ವಿಷಯಗಳತ್ತ ಚಿತ್ತಹರಿಸಿದ

ಪರಿಣಾಮವಾಗಿ ಉತ್ತಮ ಫಲಿತಾಂಶವನ್ನು ಪಡೆದ.

ಮುಂದಿನ ಐದು ವರ್ಷಗಳಲ್ಲಿ ತನ್ನ ಅಗಾಧ ಬೆಳವಣಿಗೆಯನ್ನು ಒಂದು ಬಾರಿ ಅವಲೋಕಿಸಿದ ಆತನಿಗೆ ತನ್ನನ್ನು ಬೆಂಬಲಿಸುವ ಸ್ನೇಹಿತರ ಮತ್ತು ಸಂಬಂಧಿಗಳ ಬಳಗ, ತೃಪ್ತಿದಾಯಕ ಜೀವನ ಶೈಲಿ ಆರೋಗ್ಯಕರ ಮತ್ತು ಬಲಿಷ್ಠ ಸಂಬಂಧಗಳು ಒಳ್ಳೆಯ ಉದ್ಯೋಗ, ವ್ಯವಹಾರ ಮತ್ತು ಆರ್ಥಿಕ ಸದೃಢತೆ ಯನ್ನು ಹೊಂದಿರುವುದು ಆತ್ಮತೃಪ್ತಿಯನ್ನು ತಂದಿತ್ತು. ಅದೊಂದು ದಿನ ಕುಟುಂಬದ ಒಂದು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಆತನ ಈ ಬೆಳವಣಿಗೆಯನ್ನು ಕಂಡು 'ಏನು ಮಾಡಿದೆ ನೀನು' ಎಂದು ಆತನ ಅಜ್ಜ ಕೇಳಲು ನಸುನಗುತ್ತಾ ಅಜ್ಜನಿಗೆ ಆತ ಉತ್ತರಿಸಿದ್ದು ಹೀಗೆ

" ನೀವು ಹೇಳಿದ ಮಾತುಗಳನ್ನು ನಾನು ಅಕ್ಷರಶಃ ಪಾಲಿಸಿದೆ... ಓದಿನ ಮೂಲಕ ಒಳ್ಳೆಯ ಪುಸ್ತಕಗಳ ಜ್ಞಾನವನ್ನು ಪಡೆದೆ, ಸತ್ವಯುತ ಆಹಾರ ಸೇವನೆ ಮೂಲಕ ಉತ್ತಮ ಆರೋಗ್ಯವನ್ನು ಹೊಂದಿದೆ. ಒಳ್ಳೆಯ ಹವ್ಯಾಸಗಳು ನನ್ನನ್ನು ಇನ್ನಷ್ಟು ಉತ್ತಮ ವ್ಯಕ್ತಿಯನ್ನಾಗಿ ನಿರ್ಮಿಸಿದವು ದೈಹಿಕ ವ್ಯಾಯಾಮ ನನ್ನನ್ನು ಕ್ರಿಯಾಶೀಲ ಮತ್ತು ಸದೃಢ ವ್ಯಕ್ತಿಯನ್ನಾಗಿಸಿದವು, ಒಳ್ಳೆಯ ಸ್ನೇಹಿತರ ಸಂಗ ನನ್ನನ್ನು ಬೆಂಬಲಿಸಿತು ಎಂದು ಹೇಳಿದಾಗ ಅಜ್ಜ ಅತ್ಯಂತ ತೃಪ್ತಿಯಿಂದ ಆತನ ಬೆನ್ನು ಚಪ್ಪರಿಸಿದನು. ಅಜ್ಜನ ಮುಖದಲ್ಲಿನ ತೃಪ್ತಿಯ ನಗೆ ಮೊಮ್ಮಗನ ಮುಖದಲ್ಲಿಯೂ ಪ್ರತಿಫಲಿಸಿತು.

ನೋಡಿದಿರಾ ಸ್ನೇಹಿತರೆ, ಬದುಕಿನಲ್ಲಿ ನಾವು ಕೈಗೊಳ್ಳುವ ಕೆಲವು ಒಳ್ಳೆಯ ನಿರ್ಣಯಗಳು ನಮ್ಮ ಬದುಕಿನ ದಿಕ್ಕನ್ನೇ ಬದಲಾಯಿಸಿ ಯಶಸ್ಸಿನತ್ತ ಕೊಂಡೊಯ್ಯುತ್ತವೆ ಎಂಬುದಕ್ಕೆ ಮೇಲಿನ ಕಥೆಯೇ ಸಾಕ್ಷಿ. ಅಂತಹ ಉತ್ತಮ ನಿರ್ಣಯಗಳನ್ನು ನಾವು ಕೂಡ ನಮ್ಮ ಬದುಕಿನಲ್ಲಿ ಕೈಗೊಳ್ಳುವ ಮೂಲಕ ಬದುಕನ್ನು ಉನ್ನತವಾಗಿ ಕಟ್ಟಿಕೊಳ್ಳೋಣ ಮತ್ತು ಬೇರೆಯವರಿಗೆ ಸ್ಫೂರ್ತಿಯಾಗೋಣ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ನಮ್ಮೂರ ಹನುಮಂತ



ನಮ್ಮೂರ ಹನುಮಂತ
ಅವನು ಬಹಳ ಬುದ್ದಿವಂತ
ಬಿಗ್ ಬಾಸ್ ಮನೆಗೆ ಕಾಲಿಟ್ಟ
ಬಿಗ್ ಬಾಸ್ ಸ್ಪರ್ಧೆಗೆ ಬೇಕಾಗ್ಬಿಟ್ಟ।

ಸೌಮ್ಯ ಸ್ವಭಾವದ ಹನುಮಂತ
ಮಿತಿ ಭಾಷಿ ನಮ್ಮ ಹನುಮಂತ
ಸಂದರ್ಭಕ್ಕೆ ತಕ್ಕಂತೆ ಮಾತಾಡ್ತಿದ್ದ
ನೋಡುಗರ ಮನವ ಗೆದ್ದುಬಂದ।

ನೇರ ಮಾತಿನ ಹನುಮಂತ
ಎದುರಾಳಿಗೆ ಬೇವರು ಬರಿಸಿದ
ಬಿಗ್ ಬಾಸ್ ಗೆ ರಂಜಿಸಿ ಬಿಟ್ಟ
ಮಾತು ಮಾತಿಗೆ ಚಪ್ಪಾಳೆ ಪಡೆದ।

ಇದ್ದದ್ದು ಇದ್ದಂಗೆ ಹೇಳ್ತಿದ್ದ ಹನುಮಂತ
ನಾಡಿನ ಜನರ ಹೃದಯದಲ್ಲಿ ನಿಂತ
ಎಲ್ಲರಿಗಿಂತ ಅತೀ ಹೆಚ್ಚು ಮತ ಪಡೆದ
ಬಿಗ್ ಬಾಸ್ ಮನೆಯ ವಿನ್ನರಾಗಿ ಮೆರೆದ।

– ಚಂದ್ರಶೇಖರಯ್ಯ ರೋಣದಮಠ.
ಹೊಸಪೇಟೆ.

### ಆಗು ನೀ......

ಕಲಿಯುವ ಹಾಗೂ ಕಲಿಸುವ ಗುರುವಾಗು
ನೀ...
ಪರಿವರ್ತನೆ ಯಾಗುವ ಪರಿವರ್ತಿಸುವ
ಕಲೆ ಆಗೂ ನೀ...,
ನೇತೃತ್ವ ವಹಿಸುವ, ಸಂಘಟಿಸುವ ನಾಯಕಿ
ಆಗು ನೀ....
ವಿಚಾರ ಮಾಡುವ,ಹಾಗೂ ನಿರ್ಣಯ
ಮಾಡುವ ತರುಣಿ ಆಗು ನೀ.....
ಮಾತನಾಡುವ,ಪ್ರಶ್ನಿಸುವ ಲೇಖನಿ ಆಗು
ನೀ....
ಸತ್ಯತೆ ಮತ್ತು ಶುದ್ಧತೆಯ ಪ್ರತೀಕ ಆಗು
ನೀ....
ಅಡುಗೆ ಮಾಡುವ ಉಣ ಬಡಿಸುವ
ತಾಯಿಯಾಗು ನೀ...
ದೈಹಿಕ ಶೃಂಗಾರ ಹಾಗೂ ಆತ್ಮ ಶೃಂಗಾರದ
ಮೂರ್ತಿಯಾಗು ನೀ.....
ಏನೆಲ್ಲಾ, ಆಗುವೆಯೋ ಆಗು ನೀ....
ಲೋಕದ ಕಲ್ಯಾಣಕ್ಕಾಗಿ ಉದ್ಧಾರಕ್ಕಾಗಿ
ನಿನ್ನನ್ನು ನೀನು ಕರಿಗಿಸಿಕೊಳ್ಳುವ
ಪ್ರಣತಿಯಾಗು ನೀ....

– ಚಂದ್ರಲತಾ ಟಿ, ಹೊಸಪೇಟೆ

# ಬಸವಾದಿ ಶರಣರ - ವೈಚಾರಿಕ ಪರಂಪರೆಯ ಕೊಂಡಿ ಶಾಂತರಸರು

## ಕನ್ನಡ ವಿವಿ ವಿಶ್ರಾಂತ ಪ್ರಾಧ್ಯಾಪಕ ಡಾ.ರಹಮತ್ ತರೀಕೆರೆ ಅಭಿಮತ | ವಿಚಾರ ಸಂಕಿರಣ

## ಕನ್ನಡ ಕಾವ್ಯ ಲೋಕದಲ್ಲಿ ಗಜಲ್ ಪರಂಪರೆಗೆ ಅಡಿಪಾಯ ಹಾಕಿದವರು ಶಾಂತರಸರು



■ ಹಂಪಿ ಟೈಮ್ಸ್ ಹೊಸಪೇಟೆ

ಕಲ್ಯಾಣ ಕರ್ನಾಟಕ ಭಾಗದಲ್ಲಿ ಬಸವಾದಿ ಶರಣರ ಮತ್ತು ತತ್ವ ಪದಕಾರರ ವೈಚಾರಿಕ ಪರಂಪರೆಯ ಕೊಂಡಿಯಾಗಿ ಕೆಲಸ ಮಾಡಿದವರು ಶಾಂತರಸರು. ಶರಣರ ಅನುಭಾವ ಮತ್ತು ಆಧ್ಯಾತ್ಮಿಕ ಪರಂಪರೆ ತತ್ವಪದಕಾರರಲ್ಲಿ ಮುಂದುವರಿದಿರುವುದನ್ನು ಶಾಂತರ ಸರು ಗುರುತಿಸಿ ಅದನ್ನು ಪ್ರಚಲಿತಕ್ಕೆ ತಂದರು ಎಂದು ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಡಾ.ರಹಮತ್ ತರೀಕೆರೆ ಅಭಿಪ್ರಾಯಪಟ್ಟರು.


ಕನ್ನಡ ವಿಶ್ವವಿದ್ಯಾಲಯದ ಭುವನ ವಿಜಯ ಸಭಾಂಗಣದಲ್ಲಿ ಮಂಗಳವಾರ ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಸಹಯೋಗದಲ್ಲಿ ಆಯೋಜಿಸಿದ್ದ ಶಾಂತರಸರ ಬದುಕು ಮತ್ತು ಸಾಹಿತ್ಯ ಜನ್ಮಶತಮಾನೋತ್ಸವ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು. ಶಾಂತರಸರು ಬಸವ ತತ್ವದ ಪ್ರತಿಪಾದಕರಾಗಿದ್ದರೂ, ಎಲ್ಲ ರೀತಿಯ ಸಾಮಾಜಿಕ ಬದಲಾವಣೆಗಳು ಬಸವಣ್ಣನವರ ಕಾಲದಲ್ಲೇ ಆಯಿತು ಎಂಬ ಕುರುಡು ನಂಬಿಕೆಯನ್ನು ಒಪ್ಪುತ್ತಿರಲಿಲ್ಲ. ಶಾಂತರ ಸರು ಬಸವಣ್ಣ ಪೂರ್ವದಲ್ಲಿ ಮತ್ತು ನಂತರದಲ್ಲಿ ಶರಣ ಚಳುವಳಿಗೆ ಶ್ರಮಿಸಿದ ಹಲವಾರು ಅಜ್ಞಾತ, ಅನಾಮಧೇಯ ಶರಣರನ್ನು, ತತ್ವಪದಕಾರರನ್ನು ಮುನ್ನಲೆಗೆ ತರುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಶಾಂತರಸರು ಜನ ಸಾಮಾನ್ಯರ ಪಡಿಪಾಟಲುಗಳನ್ನು ಸಾಹಿತ್ಯಕ್ಕೆ ಅಳವಡಿಸಿದವರು. ಸಾಹಿತ್ಯದ ಜೊತೆಗೆ ಅವರು ಸಂಗೀತ ಕಲಾ ಪ್ರಕಾರದ ಬೆಳವಣಿಗೆಗೂ ಒತ್ತುಕೊಟ್ಟರು. ಶಾಂತರಸರು ಗುಲ್ಬರ್ಗಾ, ಬೀದರ್ ಮತ್ತು ರಾಯಚೂರು ಭಾಗದಲ್ಲಿ ಹೆಚ್ಚಾಗಿ ಬಳಕೆಯಲ್ಲಿದ್ದ ಉರ್ದು ಭಾಷೆಯನ್ನು ಸಮುದಾಯದ ಆಚೆಗೆ ಕರೆತಂದು ಆ ಭಾಷೆಗೆ ಕವಿ ಪರಂಪರೆ ಮತ್ತು ಸಾಹಿತ್ಯ ಪರಂಪರೆಯನ್ನು ಸೃಷ್ಟಿಸುವಲ್ಲಿ ಕೊಂಡಿಯಾಗಿದ್ದರು ಎಂದರು. ಕಲ್ಯಾಣ ಕರ್ನಾಟಕ ಪ್ರದೇಶದ ಜನರು ಆಳುವ ವರ್ಗದ ಶೋಷಣೆಗೆ

ತುತ್ತಾಗಿ ಸಮಸ್ಯೆಗಳನ್ನು ಎದುರಿಸುವ ಸಂದರ್ಭದಲ್ಲಿ ಅವರ ಕಣ್ಣನ್ನು ತೆರಸಿದರು. ಕಲ್ಯಾಣ ಕರ್ನಾಟಕಕ್ಕೆ ವಿಶೇಷ ಮೀಸಲಾತಿಯನ್ನು ಕಲ್ಪಿಸುವ ಕಾರ್ಯಕ್ಕೆ ಸಾಂಸ್ಕೃತಿಕ ಆಯಾಮವನ್ನು ತಂದುಕೊಟ್ಟಿರುವ ಶಾಂತರಸರ ಬದುಕು ಮತ್ತು ಸಾಹಿತ್ಯದ ಕುರಿತು ಹೊಸ ತಲೆಮಾರಿಗೆ ದಾಟಿಸುವುದು ನಮ್ಮ ಕರ್ತವ್ಯ ಎಂದು ತಿಳಿಸಿದರು.

ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ. ಡಿ.ವಿ. ಪರಮಶಿವಮೂರ್ತಿ ಮಾತನಾಡಿ, ಕನ್ನಡ ವಿಶ್ವವಿದ್ಯಾಲಯವು ಕೇಂದ್ರ ಸಾಹಿತ್ಯ ಅಕಾಡೆಮಿ ಅವರೊಂದಿಗೆ ಶಾಂತರಸರ ಬದುಕು ಮತ್ತು ಸಾಹಿತ್ಯ ಕುರಿತು ಕಾರ್ಯಕ್ರಮವನ್ನು ಆಯೋಜಿಸಿರುವುದು ನಿಜಕ್ಕೂ ಅರ್ಥಪೂರ್ಣವಾಗಿದೆ. ಶಾಂತರಸರು ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಕೃಷಿ ಮಾಡಿದ್ದಾರೆ. ಕನ್ನಡ ಕಾವ್ಯ ಲೋಕದಲ್ಲಿ ಗಜಲ್ ಪರಂಪರೆಗೆ ಅಡಿಪಾಯ ಹಾಕಿದವರು ಶಾಂತರಸರು ಎಂದರು. ಶಾಂತರಸರ ಕವನ ಸಂಕಲನದ ಒಂದು ಕವನವನ್ನು ವಾಚಿಸಿದರು.

ಕೇಂದ್ರ ಸಾಹಿತ್ಯ ಅಕಾಡೆಮಿಯ ಸದಸ್ಯರಾದ ಬಸವರಾಜ ಸಾದರ ಮಾತನಾಡಿ, ಶಾಂತರಸರ ವ್ಯಕ್ತಿತ್ವ ತುಂಬಾ ವಿಶಿಷ್ಟವಾದುದು. ಅವರು ಹೆಸರಿಗೆ ತಕ್ಕಂತೆ ಶಾಂತವಾಗಿಯೂ ಇದ್ದರು, ಕೆಲವೊಮ್ಮೆ ಕ್ರಾಂತಿಕಾರಿಯು ಆಗುತ್ತಿದ್ದರು. ಶಾಂತರಸರಲ್ಲಿ ಪ್ರತಿಭಟಿಸುವ ಗುಣ ಚಿಕ್ಕಂದಿನಲ್ಲೇ ಕಂಡು ಬರುತ್ತದೆ. ಶಾಂತರಸರು ತಾವು ನಂಬಿದ್ದ ಧೋರಣೆಯನ್ನು ಬದಲಿಸದವರು ಮತ್ತು ಕೈಗೊಂಡ ಕಾರ್ಯಕ್ಕೆ ಯಾವಾಗಲೂ ಬದ್ಧರಾಗಿರುತ್ತಿದ್ದರು. ಶಾಂತರಸರು ಕಾವ್ಯ, ಘಜಲ್, ಕಾದಂಬರಿ, ಗ್ರಂಥಸಂಪಾದನೆ, ಅನುವಾದ ಹೀಗೆ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಕೆಲಸ ಮಾಡಿದರು. ಬಂಡಾಯವನ್ನು ಸಾಹಿತ್ಯಕ್ಕೆ ಅಳವಡಿಸಿದ ಕೀರ್ತಿಯೂ ಇವರಿಗೆ ಸಲ್ಲುತ್ತದೆ ಎಂದರು.

ಗಣ್ಯರು ಶಾಂತರಸರ ಭಾವಚಿತ್ರಕ್ಕೆ ಪುಷ್ಪ ಅರ್ಪಿಸಿದರು. ವಿವಿಧ ಗೋಷ್ಠಿಗಳಲ್ಲಿ ಪ್ರಾಧ್ಯಾಪಕರಾದ ಡಾ. ವೆಂಕಟಗಿರಿ ದಳವಾಯಿ, ಡಾ. ಅಮರೇಶ ನುಗಡೋಣಿ, ಡಾ. ಕೆ. ರವೀಂದ್ರನಾಥ, ಭಾಗ್ಯಜ್ಯೋತಿ ಹಿರೇಮಠ, ಸಿ.ಎಸ್. ಭೀಮರಾಯ, ಪ್ರಭು ಖಾನಾಪುರೆ ಇವರು ಶಾಂತರಸರ ವ್ಯಕ್ತಿತ್ವ, ಕಾವ್ಯ, ಘಜಲ್, ನಾಟಕ, ಪ್ರಬಂಧಗಳು, ಸಂಶೋಧನೆ, ಗ್ರಂಥಸಂಪಾದನೆ, ಅನುವಾದ ಮತ್ತು ಸಂಪಾದನೆಗಳ ಕುರಿತು ಪ್ರಬಂಧ ಮಂಡಿಸಿದರು. ಕನ್ನಡದ ಪ್ರಸಿದ್ಧ ಲೇಖಕಿ ಭಾರತಿ ಮೋಹನ ಕೋಟಿ ಸಮಾರೋಪ ಭಾಷಣ ಮಾಡಿದರು. ಕುಲಸಚಿವ ಡಾ.ವಿಜಯ್ ಪೂಣಚ್ಚ ತಂಬಂಡ ಅಧ್ಯಕ್ಷತೆ ವಹಿಸಿದ್ದರು. ಸಹಾಯಕ ಪ್ರಾಧ್ಯಾಪಕ ಡಾ. ಗೋವಿಂದ, ಡಾ.ಮಲ್ಲಿಕಾರ್ಜುನಗೌಡ ವಣೇನೂರಮ ಸಂಶೋಧನಾರ್ಥಿ ಸಂತೋಷ್ ನಿರ್ವಹಿಸಿದರು.



## ತುಂಗಭದ್ರಾ ನೀರಿನ ಮಟ್ಟ

ಬುಧವಾರ : 29–01–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1617.75 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 9962 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 55.247 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1588.50 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 360 ಕ್ಯುಸೆಕ್ |
| ಸಾಮರ್ಥ್ಯ | 9.826 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಕ್ರೋಧಿ

30–01–2025 – ಗುರುವಾರ

| | |
|---|---|
| ತಿಥಿ | : ಪ್ರಥಮ |
| ಪಕ್ಷ | : ಶುಕ್ಲ |
| ನಕ್ಷತ್ರ | : ಶ್ರಾವಣ/ಧನಿಷ್ಟ |
| ಯೋಗ | : ವ್ಯತಾಪತಾ |
| ಕರಣ | : ಭವ |
| ಸೂರ್ಯೋದಯ | : 07:08:50 |
| ಸೂರ್ಯಾಸ್ತ | : 18:11:54 |
| ರಾಹು ಕಾಲ | : 14:03–15:26 |
| ಯಮಘಂಡ ಕಾಲ | : 07:09–08:32 |
| ಗುಳಿಕ ಕಾಲ | : 09:55–11:17 |

ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

# ಹಂಪಿ ಟೈಮ್ಸ್ ಹಮ್ಮಿಕೊಂಡಿರುವ ಎಸ್ಸೆಸ್ಸೆಲ್ಸಿ ವಿಜ್ಞಾನ ಸರಣಿ ಚಿತ್ರಸ್ಪರ್ಧೆ–9

# ಶಾಲೆಯಲ್ಲಿ ದಿ ಬೆಸ್ಟ್ ಚಿತ್ರ ಬಿಡಿಸಿದ ವಿದ್ಯಾರ್ಥಿಗಳು

### ಹೊಸಪೇಟೆ ತಾಲ್ಲೂಕು

1. **ಸಂಗನಮ್ಮ**
ಬಾ.ಸ.ಪ.ಪೂ.ಕಾ, ಪ್ರೌಢಶಾಲಾ ವಿಭಾಗ,ಹೊಸಪೇಟೆ.
ಶಿಕ್ಷಕರು–ಶಿವಮ್ಮ
ಹೊಸಪೇಟೆ ತಾಲೂಕು

2. **ಅಮೃತ**
ಕೆ.ಜಿ.ಬಿ.ವಿ, ಕಮಲಾಪುರ
ಶಿಕ್ಷಕರು–ಗಾಯತ್ರಿ

3. **ಎನ್ ಅಪ್ಸಾನ**
ಶ್ರೀ ಸೇಂಟ್ ಸಾಯಿ ಪ್ರೌಢಶಾಲೆ, ಮರಿಯಮ್ಮನಹಳ್ಳಿ
ಶಿಕ್ಷಕರು–ರಂಜಿತಾ.ಯು

4. **ಎನ್ ಶ್ರೀನಿವಾಸ**
ಶ್ರೀ ಸೇಂಟ್ ಸಾಯಿ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಮರಿಯಮ್ಮನಹಳ್ಳಿ
ಶಿಕ್ಷಕರು–ಸರಸ್ವತಿ

5. **ಸಾತ್ವಿಕ್ ಅಂಗಡಿ**
ಸ.ಪ.ಪೂ.ಕಾಲೇಜು, ಕಮಲಾಪುರ
ಶಿಕ್ಷಕರು– ಅಸ್ಮಾತರನ್ನುಂ/ನೆಮ್ಯ ನಾಯ್ಕ

6. **ಎಂ.ಜಿ ರಾಮಾಂಜಿನಿ**
ಸರ್ಕಾರಿ ಪ್ರೌಢಶಾಲೆ, ಹಂಪಿನ ಕಟ್ಟಿ
ಶಿಕ್ಷಕರು–ವೈ.ಪ್ರಶಾಂತ್

7. **ಶ್ರೀಕಾಂತ ಎಂ**
ಸ.ಸಂ.ಪ.ಪೂ.ಕಾಲೇಜ್, ಚಿತ್ತವಾಡಗಿ
ಶಿಕ್ಷಕರು–ವಸುಧ ಡಿ.ಕೆ

8. **ಆರ್.ಸ್ಪಂದನ**
ಸ.ಬಾ.ಪ್ರೌಢಶಾಲೆ (ಮಾಪು) ಹೊಸಪೇಟೆ
ಶಿಕ್ಷಕರು–ರುಕ್ಸಾನ.ವಿ

9. **ಮೇಟಿ ಶ್ರೀನಿವಾಸ**
ಸರ್ಕಾರಿ ಪ್ರೌಢಶಾಲೆ, ಮಲಪನ ಗುಡಿ
ಶಿಕ್ಷಕರು–ಅನಿತಾ ಎ.ವಿ

10. **ಮುಸ್ಕಾನ್ ಎನ್**
ಸರ್ಕಾರಿ ಪ್ರೌಢಶಾಲೆ, ಬುಕ್ಕಸಾಗರ
ಶಿಕ್ಷಕರು–ಮನ್ಸೂರ್ ಅಲಿ

11. **ಮೈಲಾರಿ/ತೇಜಸ್ವಿ**
ಸರ್ಕಾರಿ ಪ್ರೌಢಶಾಲೆ, ಕಾಕುಬಾಳು
ಶಿಕ್ಷಕರು– ಶಶಿಧರ ಪಿ.ಎಂ

12. **ಪ್ರಶಾಂತ ಕುಮಾರ**
ಸರ್ಕಾರಿ ಪ್ರೌಢಶಾಲೆ, ಗುಂಡ
ಶಿಕ್ಷಕರು–ನಾರಾಯಣ ಕೆ

13. **ಎಂ.ಚೈತ್ರ**
ಬಿ.ಆರ್.ಆರ್.ಜಿ ಪ್ರೌಢಶಾಲೆ, ಜಿ.ನಾಗಲಾಪುರ
ಶಿಕ್ಷಕರು–ಚನ್ನಬಸವ ಕೆ.ಬಿ

14. **ಶರಣ ಬಿ.ಎ**
ಸರ್ಕಾರಿ ಪ್ರೌಢಶಾಲೆ, ಪೋತಲಕಟ್ಟೆ
ಶಿಕ್ಷಕರು–ದೇವರಾಜ್ ಕೇತಾವತ್

15. **ಹೆಚ್.ದೀಪಿಕಾ**
ಬಾ.ಸ.ಪ್ರೌಢಶಾಲೆ, ಕಮಲಾಪುರ
ಶಿಕ್ಷಕರು–ಅಮೃದಂ ಆರ್.ಸಿ

### ಹಗರಿಬೊಮ್ಮನಹಳ್ಳಿ ತಾಲೂಕು

1. **ಹೆಚ್. ಭರತ**
ಸರ್ಕಾರಿ ಪ್ರೌಢಶಾಲೆ, ವರದಾಪುರ
ಶಿಕ್ಷಕರು–ಮಂಜುಳಾ

2. **ಎಂ. ಮಹೇಶ್ವರಿ**
ಕೌದಿ ಮಹಾಂತೇಶ್ವರ ಪ್ರೌಢಶಾಲೆ, ಬಾಚಿಗೊಂಡನಹಳ್ಳಿ
ಶಿಕ್ಷಕರು–ವಿ ಪ್ರಕಾಶಪ್ಪ

3. **ಸಂಗೀತಾ.ಬಿ**
ಕೆ. ಪಿ. ಸರ್ಕಾರಿ ಪ್ರೌಢಶಾಲೆ, ಹಳೆ ಹಗರಿಬೊಮ್ಮನಹಳ್ಳಿ
ಶಿಕ್ಷಕರು–ಮುದ್ದಮ್ಮ

4. **ಕೆ.ಹರೀಶ್**
ಎಲ್.ಎಚ್.ಎಸ್ ಪ್ರೌಢಶಾಲೆ, ಹಂಪಸಾಗರ
ಶಿಕ್ಷಕರು–ವಿಜಯಕುಮಾರ ಬೇಂದ್ರೆ

5. **ನಿಶ್ಚಿತಾ.ಪಿ**
ಪಿ.ಕೆ.ಎಂ ಪ್ರೌಢಶಾಲೆ, ದಶಮಾಪುರ
ಶಿಕ್ಷಕರು–ಅನಿತಾ

6. **ಜಿ.ಲಕ್ಷ್ಮಿ**
ಶ್ರೀ.ಗು.ಬ. ಪ್ರೌಢಶಾಲೆ, ಬೆಣಕಲ್ಲು
ಶಿಕ್ಷಕರು–ಶಿವತನಯ ಎಸ್.ಸಿ

7. **ಸುಧಾ ಬಿ**
ಸರ್ಕಾರಿ ಪ್ರೌಢಶಾಲೆ, ಗದ್ದಿಕೇರಿ
ಶಿಕ್ಷಕರು–ರವಿಚಂದ್ರ ನಾಯ್ಕ ಎಲ್

8. **ಕೆ. ಶ್ರೀದೇವಿ**
ಸರ್ಕಾರಿ ಪ್ರೌಢಶಾಲೆ, ಉಪನಾಯಕನಹಳ್ಳಿ
ಶಿಕ್ಷಕರು–ಕವಿತಾ

9. **ಎಂ. ಮಹೇಶ್ವರಿ**
ಕೌದಿ ಮಹಂತೇಶ್ವರ ಪ್ರೌಢಶಾಲೆ, ಬಾಚಿಗೊಂಡನಹಳ್ಳಿ
ಶಿಕ್ಷಕರು– ಪ್ರಕಾಶಪ್ಪ ವಿ

10. **ಟಿ.ಮುಶಾಹಿದ್**
ಸರ್ಕಾರಿ ಪ್ರೌಢಶಾಲೆ, ವಲ್ಲಭಾಪುರ
ಶಿಕ್ಷಕರು– ಶಾಹಿದ್ ಬಾಷ .ಎನ್

11. **ಕೆ. ಸಂಗೀತ**
ಶ್ರೀ ಚಂದ್ರಮೌಳೇಶ್ವರ ಪ್ರೌಢಶಾಲೆ, ಹಂಪಾಪಟ್ಟಣ
ಶಿಕ್ಷಕರ ಹೆಸರು–ರಾಘವೇಂದ್ರ ಪಿ

12. **ಹೆಚ್.ಮಾನಸ**
ಕೆ.ಪಿ.ಜಿ ಪ್ರೌಢಶಾಲೆ, ತಂಬ್ರಹಳ್ಳಿ
ಶಿಕ್ಷಕರು – ಜೆ.ರಾಜೇಶ್ವರಿ

13. **ಪಿ. ಚಂದನ**
ರಾಷ್ಟ್ರೋತ್ಥಾನ ಪ್ರೌಢಶಾಲೆ, ಹ.ಬೊ. ಹಳ್ಳಿ
ಶಿಕ್ಷಕರು–ಎಲ್. ವೆಂಕಟೇಶ್

14. **ವೀರಮ್ಮ**
ಶ್ರೀ ಗುರು ಶಿವಶಾಂತವೀರ ಪ್ರೌಢಶಾಲೆ, ಕಡ್ಲಬಾಳು
ಶಿಕ್ಷಕರು–ಪರಶುರಾಮ.ಡಿ

15. **ಕಾರ್ತಿಕ್ ಗೌಡ**
ಸರ್ಕಾರಿ ಪ್ರೌಢಶಾಲೆ, ಸೊನ್ನ
ಶಿಕ್ಷಕರು– ಫಕೀರ್ ಗೌಡ ಪಾಟೀಲ್

16. **ಎಂ.ಆಕಾಶ**
ಸರ್ಕಾರಿ ಪ್ರೌಢಶಾಲೆ, ತೆಲುಗೊಳಿ
ಶಿಕ್ಷಕರು– ರವೀಂದ್ರ

### ಕೊಟ್ಟೂರು ತಾಲೂಕು

1. **ಸಂಪತ್ ಲಕ್ಷ್ಮಿ**
ಮುರಾರ್ಜಿ ಶಾಲೆ, ಅಂಬಳಿ
ಶಿಕ್ಷಕರು–ಕೊಟ್ರೇಶ ನಾಯ್ಕ

### ಸಂಡೂರು ತಾಲೂಕು

1. **ಕೆ.ಗಾಯತ್ರಿ**
ಸರ್ಕಾರಿ ಪ್ರೌಢಶಾಲೆ, ಲಕ್ಷ್ಮಿಪುರ
ಶಿಕ್ಷಕರು–ಬಿ.ವಿಜಯಾ

### ಕೂಡ್ಲಿಗಿ ತಾಲೂಕು

1. **ಚೈತ್ರಾ.ಯು**
ಹಿರೇಮಠ ಪ್ರೌಢಶಾಲೆ, ಕೂಡ್ಲಿಗಿ
ಶಿಕ್ಷಕರು–ಯಶೋಧ

### ಬಳ್ಳಾರಿ

1. **ಟಿ.ಅಕ್ಷತಾ**
ಕಿತ್ತೂರು ರಾಣಿ ಚೆನ್ನಮ್ಮ ಬಾಲಕಿಯರ ಅನುದಾನಿತ ಪ್ರೌಢಶಾಲೆ, ಬಳ್ಳಾರಿ
ಶಿಕ್ಷಕರು– ಹೆಚ್. ಶೈಲಜ

### ಗದಗ

1. **ಕಾವ್ಯ ಮಮಟಗೆರೆ**
ಶ್ರೀ ಫಲಹಾರೇಶ್ವರ ಪ್ರೌಢಶಾಲೆ, ಹಸೂಟಿ ರೋಣ ತಾ. ಗದಗ ಜಿ.
ಶಿಕ್ಷಕರು–ಎಂ.ವಿ ಪ್ರಕಾಶಾರಾಧ್ಯ

### ಶಿವಮೊಗ್ಗ

1. **ಅಕ್ಷಯಕುಮಾರ**
ಶ್ರೀ ಮಲ್ಲಿಕಾರ್ಜುನಸ್ವಾಮಿ ಪ್ರೌಢಶಾಲೆ, ಆಗರದ ಹಳ್ಳಿ
ಭದ್ರಾವತಿ ತಾ. ಶಿವಮೊಗ್ಗ ಜಿ.
ಶಿಕ್ಷಕರು– ಎಂ.ಜಿ ಮಂಜುನಾಥ

ವಿದ್ಯಾರ್ಥಿಗಳಿಗೆ ಅಭಿನಂದನೆಗಳು

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ

HAMPI TIMES MARGADARSHI
ಈಗಿಂದಲೇ ಪುನರ್‌ಮನನ ಮಾಡಿ
ಪರೀಕ್ಷೆಗೆ ನಾವು ಸಿದ್ಧ 50 ದಿನ
ಮನಸ್ಸು ಮಾಡು-ಕರ್ತವ್ಯ ನಿಷ್ಟನಾಗು-ಕಾದು ನೋಡು
https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಇಂಗ್ಲಿಷ್

## English-Grammar Question Tag

**General rules**
* Positive statements get negative tag.
* Negative statements get positive tag.
* The words no, not, nothing, barely, scarcel hardly, never, seldom, give negative meaning. So the statements with these words get positiv tag.
* In question tag we use only the respectiv pronouns of the subject ie; he, she, it, we, you they, etc
* Short forms (contractions) must be used in th question tag.

**Examples: - Study the list of short forms.**
**Give the Suitable Question Tags**
**( Practice to be Perfect)**

**Negative Sentence – No, Not, Never, Seldor**
1) She will never help, (Negative Sentence)
Will she?
2) I'm fond of reading. (+ VE)
Aren't I?
3) Raju got 100% in Mathematics. (+ VE)
Didn't he?
4) He drives carefully. (+ VE)
Doesn't he?

Read the statements and choose the correc question tag

**1) They don't come on time.**
a) are they? b) aren't they? c) do they? d) won't they?

**2) Parvez eats Pizza.**
a) does he? b) doesn't he? c) did he? d) didn't he?

**3) Kiran likes coffee.**
a) don't' he? b) wasn't he? c) doesn't he? d) does he?

**4) Nirmala tries to get good marks in the exam.**
a) does she? b) was she? c) doesn't she? d) didn't she?

**5) Meghana is looking smart and attractive today?**
a) is she? b) was she? c) isn't she? d) wasn't she?

**6) Your friends are coming tonight?**
a) are they? b) don't they? c) do they? d) aren't they?

**7) The children are playing.**
a) are they? b) aren't they? c) don't they? d) do they?

**8) Reena is leaving tonight.**
a) is she b) isn't she? c) does she? d) doesn't she?

**9) Abhinav scored a goal in the football match.**
a) didn't he? b) isn't he? c) does he? d) don't he?

**10) Rockets carry satellites and people into space.**
a) don't they? b) don't they? c) didn't they? d) did they.

www.hampitimes.com - Hampi Times Margadarshi

**Language Function:** A Language function is a category of behavior that uses language to achieve a communicative objective. It can refer to the purpose for which speech or writing is being used, or the various ways in which language is used to convey meaning, share information, and express thoughts and emotions.

**Go through the Language functions and their expressions given below in the box.**

| | | |
|---|---|---|
| 1 | Seeking agreement | Can we participate? Why don't you? , Shall we? |
| 2 | Offering help | Let me help you?, Shall I …?, what can I do?, would you like any help? |
| 3 | Expressing appreciation and Encouragement | Congratulations!, Well done…, a good performance.. |
| 4 | Showing preference and Making suggestions | Would you rather…., would you prefer…, Do you like .. better/more than… |
| 5 | Offering advise | I don't think you…. You would better… Take my advise… My advise would be… you shouldn't… Don't ever…. Why don't you? |
| 6 | Seeking information | Can you tell me….? I'd like to know….., can you help me…. |
| 7 | interview | What….? Why are you….? How come….? Any thing more.. |

Prepared by : RB Gurubasavaraj Teacher. GHS Basarakodu. H.B.Halli Taluk. Vijayanagara Dist

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

# ಫೆ.22 ಕೊಟ್ಟೂರು ಶ್ರೀಗುರುಬಸವೇಶ್ವರ ರಥೋತ್ಸವ

## ಜಾತ್ರೋತ್ಸವದಲ್ಲಿ ಸಂಪೂರ್ಣ ಬ್ಯಾನರ್ ನಿಷೇಧ, ಜಾತ್ರೆಯಲ್ಲಿ ಕಳ್ಳತನ ತಡೆಗೆ ಸಿಸಿ ಕ್ಯಾಮೆರಾ ಕಣ್ಗಾವಲು

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿಕೆ | ಈ ಬಾರಿಯೂ ಭಕ್ತರೊಂದಿಗೆ ಕೊಟ್ಟೂರಿಗೆ ಕಾಲ್ನಡಿಗೆ





**ಹಂಪಿ ಟೈಮ್ಸ್ ಹೊಸಪೇಟೆ**

ಫೆಬ್ರವರಿ 22 ರಂದು ಜರುಗಲಿರುವ ಕೊಟ್ಟೂರು ಶ್ರೀಗುರುಬಸವೇಶ್ವಸ್ವಾಮಿ ದೇವಸ್ಥಾನದ ರಥೋತ್ಸವಕ್ಕೆ ಆಗಮಿಸುವ ಭಕ್ತಾಧಿಗಳನ್ನು ಅತಿಥಿಗಳಂತೆ ಅಹ್ವಾನಿಸಲು ಕೊಟ್ಟೂರಿನ ಜನತೆ ಜಿಲ್ಲಾಡಳಿತದ ಜೊತೆ ಕೈಜೋಡಿಸಬೇಕೆಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು.

ಕೊಟ್ಟೂರು ದೇವಸ್ಥಾನದ ಮುಂಭಾಗದಲ್ಲಿ ಹಿಂದೂ ಧಾರ್ಮಿಕ ಸಂಸ್ಥೆಗಳ ಮತ್ತು ಧರ್ಮದಾಯ ದತ್ತಿ ಇಲಾಖೆ ಹಾಗೂ ಶ್ರೀ ಗುರುಬಸವೇಶ್ವರ ಸ್ವಾಮಿ ದೇವಸ್ಥಾನ ಸಹಯೋಗದಲ್ಲಿ ಏರ್ಪಡಿಸಿದ್ದ ಶ್ರೀಗುರುಬಸವೇಶ್ವರ ಸ್ವಾಮಿ ವಾರ್ಷಿಕ ರಥೋತ್ಸವದ ಪೂರ್ವಭಾವಿ ಸಭೆಯನ್ನು ಉದ್ಘಾಟಿಸಿ ಬುಧವಾರ ಅವರು ಮಾತನಾಡಿದರು. ಭಕ್ತರಿಗೆ ನಿತ್ಯ ಪ್ರಸಾದ ವ್ಯವಸ್ಥೆ ಕಲ್ಪಿಸಲು ದೇವಸ್ಥಾನದ ಎದುರುಗಡೆ ಇರುವ ಶ್ರೀಗುರುಬಸವರಾಜಸ್ವಾಮಿ ಟಸ್ಟ್ ನ ಪ್ರಸಾದ ಮತ್ತು ಕಲ್ಯಾಣ ಮಂಟಪವನ್ನು ದೇವಸ್ಥಾನಕ್ಕೆ ನೀಡುವಂತೆ ಟ್ರಸ್ಟಿ ಹರ್ಷವರ್ಧನರನ್ನು ಮನವೊಲಿಸಲಾಯಿತು. ಉತ್ತರ ಕರ್ನಾಟಕ ಭಾಗದಲ್ಲಿ ಕೊಪ್ಪಳ ಜಾತ್ರೋತ್ಸವ ಬಳಿಕ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಸೇರುವ ದೈವಿಕ ಸ್ಥಳ ಕೊಟ್ಟೂರು ಕ್ಷೇತ್ರವಾಗಿದೆ. ಈ ಬಾರಿಯ ರಥೋತ್ಸವ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಆಚರಿಸಲು ಜಿಲ್ಲಾಡಳಿತ ಸಜ್ಜಾಗಿದೆ. ಹಿಂದಿನ ಬಾರಿ 9 ಲಕ್ಷ ಜನಸಂಖ್ಯೆ ರಥೋತ್ಸವಕ್ಕೆ ಆಗಮಿಸಿದ್ದರು. ಯಾವುದೇ ತೊಂದರೆ ಆಗದಂತೆ ಸ್ಥಳೀಯರ ಸಹಕಾರದಿಂದ ಯಶಸ್ವಿಗೊಳಿಸ ಲಾಗಿದೆ. ಈ ಬಾರಿಯೂ ಜಾತ್ರೆಗೆ ಬರುವ ಭಕ್ತಾಧಿಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸುವ ಸಲುವಾಗಿ ವಿವಿಧ ಇಲಾಖೆಗಳಿಂದ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗುವುದು. ಈ ಬಾರಿಯು ಅಯ್ಯನಹಳ್ಳಿಯಿಂದ ಕಾಲ್ನಡಿಗೆ ಮೂಲಕ ಕೊಟ್ಟೂರಿಗೆ ಆಗಮಿಸುತ್ತೇನೆ. ಇದರಿಂದ ಸಮಸ್ಯೆಗಳು ಅರಿಯಲು ತಿಳಿಯಲು ಸಾಧ್ಯವಾಗಲಿದೆ ಎಂದರು.

ಶಾಸಕ ಕೆ.ನೇಮಿರಾಜ ನಾಯ್ಕ ಮಾತನಾಡಿ, ಶ್ರೀಗುರುಕೊಟ್ಟೂರೇಶ್ವರ ರಥೋತ್ಸವ ನಿಮಿತ್ತ ಕೊಟ್ಟೂರಿಗೆ ಸಂಪರ್ಕ ಕಲ್ಪಿಸುವ ಎಲ್ಲಾ ರಸ್ತೆಗಳ ಅಭಿವೃದ್ಧಿಗೆ 35 ಕೋಟಿ ರೂ.ಗಳ ಅನುದಾನ ನೀಡಲಾಗಿದೆ. ರಥೋತ್ಸವದ ವೇಳೆ ಗುಣಮಟ್ಟದ ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಸೂಚಿಸಲಾಯಿತು. ಜಾತ್ರೋತ್ಸವದಲ್ಲಿ ಸಂಪೂರ್ಣ ಬ್ಯಾನರ್ ನಿಷೇಧಗೊಳಿಸಬೇಕು ಇದಕ್ಕೆ ಪಟ್ಟಣ ಪಂಚಾಯ್ತಿಯಿಂದ ಕಟ್ಟುನಿಟ್ಟಿನ ಕ್ರಮವಹಿಸಬೇಕು. ಜಾತ್ರೆಗೆ ಆಗಮಿಸುವ ಕಾಲ್ನಡಿಗೆಯಲ್ಲಿ ಆಗಮಿಸುವ ಸಾವಿರಾರು ಭಕ್ತಾಧಿಗಳಿಗೆ ಮೂಲಭೂತ ಸೌಕರ್ಯಗಳ ಕೊರತೆಯಾಗದಂತೆ ಒದಗಿಸಬೇಕು. ಹಗರಿಬೊಮ್ಮನಹಳ್ಳಿಯಿಂದ ಕೊಟ್ಟೂರಿಗೆ ಕಾಲ್ನಡಿಗೆ ಮೂಲಕ ಆಗಮಿಸುತ್ತೇನೆ. ದಾರಿಯುದ್ಧಕ್ಕೂ ಭಕ್ತರಿಗೆ ಅನುಕೂಲ ಕಲ್ಪಿಸುವ ಸ್ವಯಂಸೇವಕರಿಗೆ ಯಾವುದೇ ತೊಂದರೆ ಆಗದಂತೆ ಸಹಕಾರ ನೀಡಬೇಕು ಎಂದರು.

ಪೂರ್ವಸಿದ್ಧತೆಗೆ ಶೀಘ್ರ ಕ್ರಮ : ಜಾತ್ರೋತ್ಸವದಲ್ಲಿ ಶುದ್ಧ ಕುಡಿಯುವ ನೀರು ಪೂರೈಕೆಗೆ ಆದ್ಯತೆ ನೀಡಿ ಮೂರು ಬಾರಿ ಪ್ರಯೋಗಾಲಯದಲ್ಲಿ ಪರೀಕ್ಷಿಸಿ ಪೂರೈಕೆಗೆ ಕ್ರಮ ವಹಿಸಬೇಕು. ಪಟ್ಟಣದಲ್ಲಿ ನೀರಿನ ಪೈಪ್‌ಲೈನ್‌ಗಳು ದುರಸ್ಥಿಗೆ ಪರಿಶೀಲನೆ ನಡೆಸಿ, ತ್ಯಾಜ್ಯ ಸಂಗ್ರಹವಾಗದಂತೆ ನಿತ್ಯ ತ್ಯಾಜ್ಯ ಸಾಗಾಣಿಕೆಗೆ ಕ್ರಮ ವಹಿಸಬೇಕು. ರಸ್ತೆಗಳನ್ನು ಧೂಳುಮುಕ್ತವಾಗಿಸಲು ನೀರು ಸಿಂಪರಣೆ, ನಿತ್ಯ ಚರಂಡಿಗಳ ಸ್ವಚ್ಛತೆಗೆ ಸ್ಥಳೀಯ ಪಟ್ಟಣ ಪಂಚಾಯಿತಿ ಅಧಿಕಾರಿಗಳು ನಿಗಾ ವಹಿಸಲು ಸೂಚಿಸಲಾಯಿತು. ಜಾತ್ರೋತ್ಸವದಲ್ಲಿ ನಾಟಕ ಕಂಪನಿ ಸೇರಿ ಮನೋರಂಜನಾತ್ಮಕ ಕೇಂದ್ರಗಳಿಂದ ತೆರಿಗೆಗಳನ್ನು ಸಂಗ್ರಹಿಸಿ ವಿಜೃಂಭಣೆಯಿಂದ ಆಚರಿಸಲು ಪಟ್ಟಣ ಪಂಚಾಯತಿ ಕಾರ್ಯ ನಿರ್ವಹಿಸಬೇಕು.

ಕಳ್ಳತನ ತಡೆಗೆ ಕಡಿವಾಣ : ಹಿಂದಿನ ರಥೋತ್ಸವದಲ್ಲಿ ಸರಗಳ್ಳತನ, ಪಿಕ್‌ಪ್ಯಾಕೆಟ್, ಮೊಬೈಲ್ ಕಳ್ಳತನಗಳ ಪ್ರಕರಣಗಳು ಹೆಚ್ಚಾಗಿರುವ ಹಿನ್ನಲೆಯಲ್ಲಿ ಈ ಬಾರಿ ವಿಶೇಷವಾಗಿ ಪೊಲೀಸ್ ಠಾಣೆಯಲ್ಲಿನ ಕಳ್ಳರ ಭಾವಚಿತ್ರಗಳನ್ನು ಬ್ಯಾನರ್‌ನಲ್ಲಿ ಮುದ್ರಣ ಮಾಡಿಸಿ ಸಾರ್ವಜನಿಕರ ಜಾಗೃತಿಗಾಗಿ ಕೊಟ್ಟೂರಿಗೆ ಆಗಮಿಸುವ ರಸ್ತೆ ಭಾಗದಲ್ಲಿ ಅಳವಡಿಸಲು ಕ್ರಮ ವಹಿಸಬೇಕು. ಹೆಚ್ಚು ಜನದಟ್ಟನೆಯ ಪ್ರಮುಖ ಸ್ಥಳಗಳನ್ನು ಗುರುತು ಮಾಡಿ ಸಿಸಿ ಕ್ಯಾಮೆರಾ ಅಳವಡಿಸಲು ಸಿದ್ಧತೆ ಕೈಗೊಳ್ಳುವಂತೆ ತಿಳಿಸಿದರು.

ಜಾತ್ರೋತ್ಸವದಲ್ಲಿ ಆರೋಗ್ಯ ರಕ್ಷಣೆಯ ಹಿತದೃಷ್ಟಿಯಿಂದ ಒಟ್ಟು 6 ಅಂಬ್ಯುಲೆನ್ಸ್, 4 ತಾತ್ಕಾಲಿಕ ಆರೋಗ್ಯ ಕೇಂದ್ರಗಳನ್ನು ತೆರೆಯಲಾಗುವುದು. ರಥೋತ್ಸವದ ವೇಳೆ ಕಾಲ್ತುಳಿತವಾಗದಂತೆ, ಜಾತ್ರೆಗೆ ಆಗಮಿಸುವ ವೇಳೆ ರಸ್ತೆಗಳಲ್ಲಿ ಟ್ರಾಫಿಕ್ ಜಾಮ್ ಆಗದಂತೆ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸ್ ಬಂದೋಬಸ್ತ್ ನೀಡಲಾಗುವುದು. ಜಾತ್ರೆಗೆ ಬರುವ ಭಕ್ತಾಧಿಗಳಿಗೆ ಬಸ್‌ಗಳ ತೊಂದರೆಯಾಗದಂತೆ ಜಿಲ್ಲೆಯ ಎಲ್ಲಾ ಭಾಗದಿಂದಲೂ ಹೆಚ್ಚಿನ ಸಂಖ್ಯೆಗಳಲ್ಲಿ ಬಸ್‌ಗಳ ಸಂಪರ್ಕ ಕಲ್ಪಿಸಲಾಗುತ್ತದೆ. ಸ್ಥಳೀಯ ಬಸ್‌ಗಳು ಹೆಚ್ಚುವರಿ ಟ್ರಿಪ್‌ಗಳ ಮೂಲಕ ಭಕ್ತರು ಬರಲು, ಹೋಗಲು ತೊಂದರೆಯಾಗದಂತೆ ವ್ಯವಸ್ಥೆ ಕಲ್ಪಿಸುವಂತೆ ಸಾರಿಗೆ ಅಧಿಕಾರಿಗಳಿಗೆ ಸೂಚಿಸಲಾಯಿತು. ಜಾತ್ರೋತ್ಸವದಲ್ಲಿ ನಾಟಕ ಮತ್ತು ಮನೋರಂಜನಾ ಕೇಂದ್ರಗಳಿಗೆ ಮಾತ್ರ ಅವಕಾಶ ನೀಡಬೇಕು.

ಸ್ಥಳೀಯರ ಸಲಹೆಗಳು : ಪಟ್ಟಣದಲ್ಲಿನ ಬಸ್‌ಸ್ಟಾಂಡ್ ಬಳಿಯಿರುವ ನಿರುಪಯುಕ್ತ ವಿದ್ಯುತ್ ಕಂಬಗಳನ್ನು ಜೆಸ್ಕಾಂ ಇಲಾಖೆ ತೆರುವುಗೊಳಿಸಬೇಕು. ವಿವಿಧ ವಾರ್ಡಗಳಲ್ಲಿ ಜನರ ಓಡಾಟ ನಿಯಂತ್ರಿಸಲು ಅನಗತ್ಯವಾಗಿ ಬ್ಯಾರಿಕೇಡ್‌ಗಳನ್ನು ಅಳವಡಿಸದಂತೆ ಪೊಲೀಸ್ ಇಲಾಖೆ ಕ್ರಮ ವಹಿಸಬೇಕು. ದೇವಸ್ಥಾನ ಪಕ್ಕದಲ್ಲಿರುವ ನಿವೇಶನದಲ್ಲಿ ತಾತ್ಕಾಲಿಕವಾಗಿ ಮಹಿಳೆಯರಿಗೆ ಸ್ನಾನಗೃಹ ಶೀಘ್ರ ನಿರ್ಮಿಸಲು ಆದ್ಯತೆ ನೀಡಬೇಕು. ರಥೋತ್ಸವದ ದಿನ ರಥದ ಬಳಿ ಹೂ–ಹಣ್ಣು ಮಾರಾಟ ವ್ಯಾಪಾರಿಗಳಿಗೆ ತೊಂದರೆ ಆಗದಂತೆ, ಮಹಿಳೆಯರಿಗೆ ಶೌಚಾಲಯ ವ್ಯವಸ್ಥೆಗೆ ಮೊಬೈಲ್ ಟಾಯ್ಲೆಟ್ ಸಂಖ್ಯೆ ಹೆಚ್ಚಿಸುವಂತೆ, ರಥೋತ್ಸವದ ದಿನ ಯಾವುದಾದರೊಂದು ಮುಖ್ಯ ಟಿವಿ ವಾಹಿನಿಯಲ್ಲಿ ಲೈವ್ ಪ್ರಸಾರಕ್ಕೆ ಅನುಕೂಲ ಮಾಡಬೇಕು. ಡ್ರೋನ್ ಮೂಲಕ ಸ್ವಾಮಿಗೆ ಪುಷ್ಪಾರ್ಚನೆ ಮಾಡಲು ಅವಕಾಶ ನೀಡಿ. ಪಲ್ಲಕ್ಕಿ ಉತ್ಸವದ ವೇಳೆ ಜನರು ಮುಟ್ಟಿ ನಮಸ್ಕಾರ ಮಾಡಲು ಬರುವ ಜನರನ್ನು ಪೊಲೀಸ್ ಅಧಿಕಾರಿಗಳು ನಿಯಂತ್ರಣ ಮಾಡಬೇಕು. ಸಾರ್ವಜನಿಕರಿಗೆ ಕಿರಿ ಕಿರಿ ಉಂಟಾಗುವ ಧ್ವನಿವರ್ಧಕಗಳು, ಪೀಪಿಗಳನ್ನು ನಿಷೇಧಿಸುವಂತೆ ಸ್ಥಳೀಯರು ಸಲಹೆಗಳನ್ನು ನೀಡಿದರು.

ಈ ವೇಳೆ ಜಿಪಂ ಸಿಇಓ ನೊಂಗ್ಜಾಯ್ ಮೊಹಮ್ಮದ್ ಅಕ್ರಮ್ ಅಲಿ ಷಾ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಲೀಂ ಪಾಷಾ, ಮಹಲ್ ಮಠದ ಕೊಟ್ಟೂರು ದೇವರು, ಧರ್ಮಕರ್ತ ಶೇಖರಯ್ಯ ಪಟ್ಟಣ ಪಂಚಾಯತಿ ಅಧ್ಯಕ್ಷ ರೇಖಾ ರಮೇಶ್, ಉಪಾಧ್ಯಕ್ಷ ಸಿದ್ದಯ್ಯ ಸ್ವಾಮಿ, ಮುಖಂಡ ಎಂ.ಎಂ.ಜೆ. ಹರ್ಷವರ್ಧನ್, ತಹಸೀಲ್ದಾರ ಅಮರೇಶ್. ತಾಪಂ ಇಓ ಡಾ.ಆನಂದ್ ಕುಮಾರ ವೇದಿಕೆಯಲ್ಲಿದ್ದರು, ಶ್ರೀಗುರುಬಸವೇಶ್ವರ ಸ್ವಾಮಿ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಹನುಮಂತಪ್ಪ, ಪ.ಪಂ. ಮುಖ್ಯಾಧಿಕಾರಿ ನಸ್ರೂಲ್ಲ, ಪಿಎಸ್ಐ ಗೀತಾಂಜಲಿ ಇದ್ದರು.

ಮೈಕ್ರೋ ನ್ಯೂಸ್

## ಇಂದಿನಿಂದ ಸ್ಪರ್ಶ ಕುಷ್ಠರೋಗ ಜಾಗೃತಿ ಅಭಿಯಾನ

**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿಗಳ ಕಾರ್ಯಾಲಯದ ಸಹಯೋಗದಲ್ಲಿ ಸ್ಪರ್ಶ ಕುಷ್ಠರೋಗ ಜಾಗೃತಿ ಅಭಿಯಾನವನ್ನು ಜನವರಿ 30 ರಿಂದ ಫೆಬ್ರವರಿ 13ರ ವರೆಗೆ ಕೊಪ್ಪಳ ಜಿಲ್ಲೆಯಲ್ಲಿ ನಡೆಯಲಿದೆ ಎಂದು ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿಗಳ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

## ಸ್ವ-ಸಹಾಯ ಸಂಘಗಳಿಂದ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಕೂಡ್ಲಿಗಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕವನ್ನು ಸಮರ್ಪಕವಾಗಿ ವಸೂಲಾತಿ ಮಾಡಲು ಅರ್ಹ ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರಿಂದ ಅರ್ಜಿ ಅಹ್ವಾನಿಸಲಾಗಿದೆ ಎಂದು ಮುಖ್ಯಾಧಿಕಾರಿ ಎಂ.ಕೆ.ಮುಗುಳಿ ತಿಳಿಸಿದ್ದಾರೆ.

ಕೂಡ್ಲಿಗಿ ಪಟ್ಟಣ ಪಂಚಾಯಿತಿಯ ಡೇ–ನಲ್ಮ್ ಅಭಿಯಾನದಡಿ ರಚಿಸಲಾಗಿರುವ ಅರ್ಹ ಮಹಿಳಾ ಸ್ವಸಹಾಯ ಸಂಘಗಳ ಮೂಲಕ ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕವನ್ನು ವಸೂಲಾತಿ, ಸಂಗ್ರಹಣೆ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಡೇ–ನಲ್ಮ್ ಗುಂಪುಗಳಲ್ಲಿನ ಸದಸ್ಯರು ಕನಿಷ್ಠ 7ನೇ ತರಗತಿಯವರೆಗೆ ಶಿಕ್ಷಣವನ್ನು ಹಾಗೂ ಎಲೆಕ್ಟ್ರಾನಿಕ್ಸ್ ಪರಿಕರಗಳನ್ನು ಬಳಸುವ ಸಾಮರ್ಥ್ಯವನ್ನು ಹೊಂದಿರಬೇಕು. ಆದ್ಯತೆ ಮೇರೆಗೆ ಹೆಚ್ಚಿನ ವಿದ್ಯಾಭ್ಯಾಸ ಪಡೆದವರಿಗೆ ಆದ್ಯತೆ ನೀಡಲಾಗುವುದು. ಪಟ್ಟಣ ಪಂಚಾಯಿತಿ ವ್ಯಾಪ್ತಿಯೊಳಗೆ ಬರುವ ಮಹಿಳಾ ಸ್ವಸಹಾಯ ಸಂಘದ ಸದಸ್ಯರುಗಳು ಫೆ.12 ರೊಳಗೆ ಅರ್ಜಿಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕೂಡ್ಲಿಗಿ ಪಟ್ಟಣ ಪಂಚಾಯಿತಿ ಕಾರ್ಯಾಲಯದ ಡೇ–ನಲ್ಮ್ ಶಾಖೆಗೆ ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಶೇ.30 ಆದಾಯ ಹೆಚ್ಚಳ


ಮೊದಲ ಪುಟದಿಂದ

ಆಯುಕ್ತರನ್ನು ಹಾಗೂ ತಹಶಿಲ್ದಾರರನ್ನು ಕಳುಹಿಸಿಕೊಡಲಾಗುವುದು ಎಂದು ಹೇಳಿದಾಗ ಸಭೆ ಚಪ್ಪಾಳೆತಟ್ಟಿ ಸ್ವಾಗತಿಸಿದರು.

ಕಲ್ಯಾಣಮಂಟಪ ಧಾರ್ಮಿಕ ದತ್ತಿ ಇಲಾಖೆ ವಶವಾದರೆ. ಇಲಾಖೆಯಿಂದ ಭಕ್ತರಿಗೆ ಮೂರು ಟೈಂ ಪ್ರಸಾದ್‌ದ ವ್ಯವಸ್ಥೆ ಮಾಡಲಾಗುವುದು ಎಂದರು. ವಿಜಯನಗರ ಜಿಲ್ಲೆಯ ಎಲ್ಲಾ ದೇವಾಯಗಳನ್ನು ಡಿಜಿಟಲಿಕರಣ ಮಾಡಿರುವುದರಿಂದ ಜಿಲ್ಲೆಯ ಎಲ್ಲಾ ದೇವಾಲಯಗಳಿಂದ ಶೇ.30 ರಷ್ಟು ಆದಾಯ ಹೆಚ್ಚಾಗಿದೆ ಎಂದರು.

ಪಾದಯಾತ್ರೆಗಳಿಗೆ ಅನುಕೂಲ ಕಲ್ಪಿಸಲು 5 ಅಂಬುಲೆನ್ಸ್. 4 ತಾತ್ಕಾಲಿಕ ಆಸ್ಪತ್ರೆಗಳನ್ನು ತೆರೆಯಲಾಗುವುದು. ಪಟ್ಟಣದಿಂದ 1 ಕಿ.ಮೀ. ದೂರದಲ್ಲಿ ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗುವುದು. ಕುಡಿಯುವ ನೀರನ್ನು ದಿನದಲ್ಲಿ ಮೂರು ಸಾರಿ ಪರೀಕ್ಷೆ ಮಾಡುವಂತೆ ಅಧಿಕಾರಿಗಳಿಗೆ ಡಿ.ಸಿ. ಆದೇಶಿಸಿ. ಪೊಲೀಸ್ ಸಬ್ ಇನ್ಸಪೆಕ್ಟರ್‌ಗೆ ಕಳ್ಳರ ಫೋಟೋಗಳನ್ನು ಪಟ್ಟಣದ ಹೊರವಲಯದಲ್ಲಿ ಪ್ರದರ್ಶಿಸುವಂತೆ ತಿಳಿಸಿದರು.

ವೇದಿಕೆಯಲ್ಲಿ ಮಹಲ್ ಮಠದ ಕ್ರೀಯಾಮೂರ್ತಿ ಕೊಟ್ಟೂರು ದೇವರು ಶಿವಪ್ರಕಾಶ್, ದರ್ಮಕರ್ತರು ಶೇಖರಯ್ಯ, ಎಎಸ್ಪಿ ಸಲೀಂಪಾಷ. ತಹಶಿಲ್ದಾರ್ ಜಿ.ಕೆ. ಅಮರೇಶ. ತಾಪಂ ಇಓ ಡಾ. ಆನಂದಮೂರ್ತಿ. ಪಪಂ ಅಧ್ಯಕ್ಷೆ ಬದ್ದಿ ರೇಖಾ, ಉಪಾಧ್ಯಕ್ಷ ಜಿ.ಸಿದ್ಧಯ್ಯ ಇತರರಿದ್ದರು. ಕೊಟ್ಟೂರೇಶ್ವರಿ ಪ್ರಾರ್ಥಿಸಿದರು. ದೇವಾಲಯದ ಇಓ ಹನುಮಂತಪ್ಪ ಸ್ವಾಗತಿಸಿದರು. ದತ್ತಿ ಇಲಾಖೆ ಸಹಾಯಕ ಆಯುಕ್ತರು ಗಂಗಾದರಪ್ಪ ವಂದಿಸಿದರು.




# ಬಂಜಾರ ಬಹುಮುಖಿ ಕಲಾ ಪ್ರತಿಭಾನ್ವೇಷಣೆ ಮಳಾವ್ರೋ ಕಾರ್ಯಕ್ರಮಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಬಂಜಾರ ಸಮುದಾಯದ ಬಹುಮುಖಿ ಕಲಾ ಪ್ರತಿಭಾನ್ವೇಷಣೆ–ಕಲಾ ಮಳಾವ್ ಕಾರ್ಯಕ್ರಮ ವನ್ನು ಹಮ್ಮಿಕೊಳ್ಳಲಾಗಿದ್ದು, ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಲಾಪ್ರದರ್ಶನ ನೀಡಲು ಅರ್ಹ ಬಂಜಾರ ಸಮುದಾಯದ ಕಲಾವಿದರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ತಾಂಡಾ ಅಭಿವೃದ್ಧಿ ನಿಗಮದ ವಲಯ ಅಭಿವೃದ್ಧಿ ಅಧಿಕಾರಿ ತಿಳಿಸಿದ್ದಾರೆ.

ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮವು ತಾಂಡಾಗಳಿಗೆ ಮೂಲಭೂತ ಸೌಲಭ್ಯವನ್ನು ಒದಗಿಸುವುದರ ಜೊತೆಗೆ ಬಂಜಾರ ಸಮುದಾಯದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಮತ್ತು ಸಾಂಸ್ಕೃತಿಕ, ಅಭಿವೃದ್ಧಿಗಾಗಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಬಂಜಾರರ ಸಾಂಪ್ರದಾಯಿಕವಾದ ಸಂಸ್ಕೃತಿ ಮತ್ತು ಕಲೆಗಳನ್ನು ಉಳಿಸಿ ಬೆಳೆಸಿ ಪುನಶ್ಚೇತನಗೊಳಿಸುವ ಉದ್ದೇಶದಿಂದ ಮತ್ತು ಬಂಜಾರ ಕಲಾವಿದರ ಪ್ರತಿಭೆಯನ್ನು ಹೊರ ತರಲು ಬಂಜಾರರ ಬಹುಮುಖಿ ಕಲಾ ಪ್ರತಿಭಾನ್ವೇಷಣೆ, ಕಲಾ ಮಳಾವ್ರೋ ಕಾರ್ಯಕ್ರಮ ವನ್ನು ಹಮ್ಮಿಕೊಳ್ಳಲಾಗಿದೆ.

ಬಂಜಾರ ಸಮುದಾಯದ ಬಹುಮುಖಿ ಕಲಾ ಪ್ರಕಾರಗಳಾದ ವಾಜಾ ವಾದ್ಯ ಕಲೆ, ಕಥನ ಗಾಯನ (ಸಣ್ಣ ವಾಜಾ), ಲೆಂಗಿ ನೃತ್ಯ, ನಂಗಾರಾ ಠೋಳಿ ಬಿಡಿಸುವ ನೃತ್ಯ, ಮಹಿಳೆಯರ ಸಾಂಪ್ರದಾಯಿಕ ನೃತ್ಯ, ಘೂಮರ್ ನೃತ್ಯ, ಮಹಿಳೆಯ ಜಾನಪದ ನೃತ್ಯ, ಮಹಿಳೆಯರ ಸಾಂಪ್ರದಾಯಿಕ ಗಾಯನ ಮತ್ತು ನೃತ್ಯ, ಬಂಜಾರ ಸುಗಮ ಸಂಗೀತ, ಬಾಲಕಿಯರ ನೃತ್ಯ, ಬಾಲಕರ ಲೆಂಗಿ ನೃತ್ಯ, ಬಾಲಕರ ಮತ್ತು ಬಾಲಕಿಯರ ಆಧುನಿಕ ನೃತ್ಯ, ಮಹಿಳೆಯರ ಹವೆಲಿ & ಡಾವಲೋ ಪ್ರಕಾರಗಳಲ್ಲಿ ಬಂಜಾರ ಸಮುದಾ ಯದ ಕಲಾವಿದರು ಭಾಗವಹಿಸಿ ತಮ್ಮಲ್ಲಿರುವ ಕಲಾ ಪ್ರತಿಭೆಗೆ ಪ್ರಶಸ್ತಿ ಪಡೆಯಲು ಅವಕಾಶವನ್ನು ಕಲ್ಪಿಸಲಾಗಿದೆ.

ಆಸಕ್ತರು ಅರ್ಜಿ ಪಡೆದು ದಾಖಲೆಗಳೊಂದಿಗೆ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ, ವಲಯ ಕಛೇರಿ, ಕೊಪ್ಪಳ ಸರಸ್ವತಿ ವಿದ್ಯಾ ಮಂದಿರದ ಹತ್ತಿರ ಕೇಂದ್ರೀಯ ವಿದ್ಯಾಲಯ ರಸ್ತೆ, ಜಿಲ್ಲಾ ಬಂಜಾರ ಭವನ ಬಹದ್ದೂರ ಬಂಡಿ ಕೊಪ್ಪಳ–583238, ಇಲ್ಲಿಗೆ ಜ.30 ರೊಳಗಾಗಿ ಸಲ್ಲಿಸಬೇಕು. ಈ ಹಿಂದೆ ನಿಗಮದಿಂದ ನಡೆದ ಎಲ್ಲಾ ಕಲಾ ಮಳಾವ್ರೋ ಕಾರ್ಯಕ್ರಮದಲ್ಲಿ ಪ್ರಥಮ ಸ್ಥಾನ, ದ್ವಿತೀಯ ಸ್ಥಾನ ಹಾಗೂ ತೃತೀಯ ಸ್ಥಾನ, ಪಡೆದ ಕಲಾ ತಂಡಗಳ ಕಲಾವಿದರಿಗೆ ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ ಎಂದು ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ಕೊಪ್ಪಳ ವಲಯ ಕಚೇರಿಯ ವ್ಯವಸ್ಥಾಪಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪುಸ್ತಕ ಪ್ರಕಟಣೆ ಆಸಕ್ತ ಬರಹಗಾರರಿಂದ ಸಾರಲೇಖನ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯು ಕಲ್ಯಾಣ ಕರ್ನಾಟಕದ ಭಾಷೆ, ಸಾಹಿತ್ಯ, ಸಾಮರಸ್ಯ ಸಂಸ್ಕೃತಿ, ಶೋಷಿತರ–ಮಹಿಳೆಯರ ಸ್ಥಿತಿಗತಿ, ಸ್ವಾತಂತ್ರ್ಯ ಚಳುವಳಿ, ಸಾಮಾಜಿಕ ಚಳುವಳಿಗಳು, 371ನೇ ಕಲಂ ಹೋರಾಟ ಮತ್ತು ಅನುಷ್ಠಾನ, ಸಾಧಕ–ಬಾಧಕಗಳು, ಭವಿಷ್ಯದಲ್ಲಿ ಅಭಿವೃದ್ಧಿಪರ ಹಮ್ಮಿಕೊಳ್ಳಬೇಕಾದ ಯೋಜನೆಗಳ ಸೇರಿದಂತೆ ಒಟ್ಟಾರೆ ಇತಿಹಾಸದ ಕುರಿತು ಆಯಾ ಕ್ಷೇತ್ರಗಳಲ್ಲಿ ಅಂತಾರಾಷ್ಟ್ರೀಯ ಮಟ್ಟದ ವಿದ್ವತ್ಪೂರ್ಣ ಸಂಶೋಧನಾ ಪುಸ್ತಕಗಳನ್ನು ಹೊರತರಲು ಯೋಚಿಸಿದ್ದು, ಇದಕ್ಕಾಗಿ ಆಸಕ್ತ ಬರಹಗಾರರಿಂದ ಸಾರಲೇಖನ ಆಹ್ವಾನಿಸಿದೆ.

ಪ್ರಾಚೀನ, ಮಧ್ಯಕಾಲಿನ, ಆಧುನಿಕ ರಾಜ್ಯಾಡಳಿತ ಸೇರಿದಂತೆ, ಸಂಸ್ಥಾನಿಕರ ಕಾಲಘಟ್ಟದ ಇತಿಹಾಸ, ರಾಜ್ಯಶಾಹಿ ವ್ಯವಸ್ಥೆಯಿಂದ ಪ್ರಜಾಶಾಹಿ ಭಾರತದಲ್ಲಿ ವಿಲೀನಘಟ್ಟ, ಏಕೀಕರಣ ಚಳುವಳಿ, ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಘಟ್ಟಗಳು, ಸಾಮಾಜಿಕ ಚಳುವಳಿಗಳು, ಸತ್ಯಶೋಧನಾ ಸಮಿತಿ ವರದಿ, ಫಜಲ್ ಅಲಿ ಆಯೋಗದ ವರದಿ, ಧರ್ಮಸಿಂಗ್ ಸಮಿತಿ ವರದಿ, ಬಚಾವತ್ ಆಯೋಗದ ವರದಿ, ನಂಜುಂಡಪ್ಪ ಆಯೋಗದ ವರದಿಗ ಅಧ್ಯಯನ, ಮಾನವ ಅಭಿವೃದ್ಧಿ, ಮಾಧ್ಯಮ, ಪ್ರಾದೇಶಿಕ ಅಸಮತೋಲನೆ, ಈ ಭಾಗದ ಉಡುಗೆ ತೊಡುಗೆ, ಆಹಾರ, ಪರಿಸರ, ಖನಿಜಸಂಪತ್ತು, ಅಲೆಮಾರಿ, ಕಲೆ, ಅರಣ್ಯ, ವಿಜ್ಞಾನ, ತಂತ್ರಜ್ಞಾನ, ನೀರಾವರಿ, ಕೈಗಾರಿಕೆ, ವಾಣಿಜ್ಯ, ಸಾರಿಗೆ, ರಸ್ತೆ ಸಂಪರ್ಕ, ಕ್ರೀಡೆ ಕ್ಷೇತ್ರಗಳ ಕುರಿತು ರಾಷ್ಟ್ರ–ಅಂತರಾಷ್ಟ್ರೀಯ ಮಟ್ಟದಲ್ಲಿ ಸಂಶೋಧನೆ ಮಾಡಿರುವ ವಿದ್ವಾಂಸರಿಂದ ಒಂದು ನೂರು ಪುಸ್ತಕಗಳನ್ನು ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಬರೆಸಿ ಪ್ರಕಟಿಸಲಾಗುತ್ತಿದೆ.

ಈ ಯೋಜನೆಯಲ್ಲಿ ಸಂಶೋಧನಾತ್ಮಕ ಪುಸ್ತಕ ಬರೆಯುವ ಆಸಕ್ತಿ ಇರುವವರು ತಾವು ಪುಸ್ತಕ ಬರೆಯಬಹುದಾದ ಕ್ಷೇತ್ರ, ವಿಷಯ, ಶೀರ್ಷಿಕೆಗಳನ್ನು ಸ್ಪಷ್ಟವಾಗಿ ಬರೆದು ಐದು ಪುಟಗಳಿಗೆ ಮೀರದಂತೆ ಸಾರಲೇಖಗಳನ್ನು ಫೆಬ್ರವರಿ 20 ರೊಳಗೆ ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, 'ಅಭಿವೃದ್ಧಿ ಭವನ' ಐವಾನ–ಏ–ಶಾಹಿ, ಕಲಬುರಗಿ–585102 ವಿಳಾಸಕ್ಕೆ ಅಂಚೆ ಮೂಲಕ, ಖುದ್ದಾಗಿ ಅಥವಾ ಇಮೇಲ್ ವಿಳಾಸ kketihasa@gmail.com ಮೂಲಕವೂ ಸಲ್ಲಿಸಬಹುದು.

ಸಾರಲೇಖವು ಆಯ್ದ ಕ್ಷೇತ್ರಗಳಲ್ಲಿ, ಆಯ್ದ ವಿಷಯಕ್ಕೆ ಸಂಬಂಧಿಸಿದ ಇದುವರೆಗಿನ ಅಧ್ಯಯನಗಳು, ಸಿದ್ಧಾಂತಗಳ ಅನ್ವಯ, ಅಧ್ಯಯನ ಕ್ಷೇತ್ರದ ಸಧ್ಯದ ಪರಿಸ್ಥಿತಿ, ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಳ್ಳುವ ಸಿದ್ಧಾಂತ ಮತ್ತು ವಿಧಾನಗಳು, ಅವುಗಳ ಸಮರ್ಪಕತೆ, ಆಯ್ದುಕೊಂಡ ವಿಷಯದ ಅಧ್ಯಯನದ ಫಲಿತಗಳು, ಸಾಮಾಜಿಕ ಉಪಯೋಗಗಳು ಇವುಗಳನ್ನು ಒಳಗೊಂಡಿರಬೇಕು. ಸೂಚಕ ಪದಗಳು ಮತ್ತು ಅವಶ್ಯ ಸಂದರ್ಭಗ್ರಂಥಗಳು ಕಡ್ಡಾಯವಾಗಿ ಇರಬೇಕು.

ಸಲ್ಲಿಕೆಯಾದ ಸಾರಾಲೇಖಗಳನ್ನು ಪರಿಶೀಲನಾ ಸಮಿತಿ ಆಯ್ಕೆ ಮಾಡಲಿದ್ದು, ಸಮಿತಿಯ ನಿರ್ಣಯವೆ ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೊ.9844615020 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಕೆಕೆಆರ್‌ಡಿಬಿ ಮಂಡಳಿಯ ಉಪ ಕಾರ್ಯದರ್ಶಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಸ್ತೆ ಸುರಕ್ಷತೆಗೆ ಕ್ರಮವಹಿಸಿ–ಡಿಸಿ



**ಹಂಪಿ ಟೈಮ್ಸ್ ಕೊಪ್ಪಳ**

ರಸ್ತೆ ಸುರಕ್ಷತೆ ಕುರಿತು ತೆಗೆದುಕೊಂಡ ನಿರ್ಣಯಗಳಿಗೆ ಕ್ರಮವಹಿಸಬೇಕು ಸಭೆಯಲ್ಲಿ ತಿಳಿಸಿದ ಎಲ್ಲಾ ಮಾಹಿತಿಗಳನ್ನು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಪಾಲನೆ ಮಾಡಬೇಕೆಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿದರು.ಅವರು ಬುಧವಾರ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಕರೆದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ರಸ್ತೆ ಸುರಕ್ಷತೆ ಕುರಿತು ಇರುವ ಸುಪ್ರೀಂ ಕೋರ್ಟ್ ನಿರ್ದೇಶನಗಳನ್ನು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಪಾಲನೆ ಮಾಡಬೇಕು ಇಲ್ಲದಿದ್ದರೆ ನ್ಯಾಯಾಲಯದ ಆದೇಶದ ಉಲ್ಲಂಘನೆಯಾಗುತ್ತದೆ. ಹಾಗಾಗಿ ಅಧಿಕಾರಿಗಳು ಎಚ್ಚರಿಕೆಯಿಂದ ಕೆಲಸ ಮಾಡಬೇಕು. ರಸ್ತೆಗಳಲ್ಲಿ ಬ್ಲ್ಯಾಕ ಸ್ಪಾಟಗಳಿದ್ದರೆ ತಕ್ಷಣ ಸರಿಪಡಿಸಬೇಕೆಂದರು.

ರಾಷ್ಟ್ರೀಯ ಹೆದ್ದಾರಿಗಳಲ್ಲಿ ಏನಾದರೂ ಸಮಸ್ಯೆಗಳಾದರೆ ಜನರು ನಮಗೆ ಕೇಳುತ್ತಾರೆ. ರಸ್ತೆಗಳಲ್ಲಿ ಲೈಟಿಂಗ್. ಸಿ.ಸಿ.ಟಿ.ವಿ. ಸೈನೇಜಗಳನ್ನು ಅವಶ್ಯಕತೆ ಇರುವಲ್ಲಿ ಹಾಕಬೇಕು ಮತ್ತು ನಿಗದಿಪಡಿಸಿದ ದಿನಾಂಕಗಳಂದು ರಸ್ತೆ ಸುರಕ್ಷತಾ ಕುರಿತು ಸಭೆ ನಡೆಯಬೇಕು. ಇಲ್ಲದಿದ್ದರೆ ತಮಗೆ ಕಾರಣ ಕೇಳಿ ನೋಟಿಸ್ ನೀಡಲಾಗುವುದು ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಸೂಚನೆ ನೀಡಿದರು. ಅತಿ ವೇಗವಾಗಿ ವಾಹನ ಚಲಾವಣೆ ಹಾಗೂ ಮದ್ಯಪಾನ ಮಾಡಿ ವಾಹನ ಚಲಾಯಿಸುವವರ ಮೇಲೆ ಪ್ರಕರಣಗಳನ್ನು ದಾಖಲಿಸಬೇಕು ಎಂದು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ದಿ ಮಾತನಾಡಿ ಕೆಲವು ಕಡೆ ಟೋಲಗೇಟಗಳಲ್ಲಿ ದ್ವೀ ಚಕ್ರ ವಾಹನಗಳವು ಓಡಾಡುವ ಮಾರ್ಗದಲ್ಲಿ ಸಿ.ಸಿ.ಟಿ.ವಿ ಅಳವಡಿಸಿಲ್ಲ. ರಸ್ತೆಗಳಲ್ಲಿ ಎಷ್ಟು ಬ್ಲ್ಯಾಕ್ ಸ್ಪಾಟಗಳನ್ನು ಗುರುತಿಸಿದ್ದಿರಾ. ಸಭೆಗೆ ಸುಮ್ಮನೆ ಬಂದು ಹೋಗುವ ಹಾಗೆ ಆಗಬಾರದು. ನಿಖರವಾಗಿ ಮಾಹಿತಿಯೊಂದಿಗೆ ಸಭೆಗೆ ಬರಬೇಕು. ಮುನಿರಾಬಾದ ಒಳಗಡೆ ಬಸ್ಸು ಬರುತ್ತಿಲ್ಲ ಎಂದು ಶಾಲಾ–ಮಕ್ಕಳು ಬಂದು ನಮಗೆ ದೂರು ನೀಡುತ್ತಿದ್ದಾರೆ. ಯಾಕೆ ಹೋಗುತ್ತಿಲ್ಲ. ಇದರಿಂದ ಶಾಲಾ–ಮಕ್ಕಳಿಗೆ ತೊಂದರೆಯಾಗುವುದಿಲ್ಲವೆ. ಡ್ರೈವರಗಳಿಗೆ ಈ ಕುರಿತು ನಿರ್ದೆಶನ ನೀಡಿ ಮಾತು ಕೇಳದಿದ್ದರೆ ಅವರ ಮೇಲೆ ಕ್ರಮ ಜರುಗಿಸಿ ಎಂದು ಸಾರಿಗೆ ಇಲಾಖೆಯು ಅಧಿಕಾರಿಗೆ ಹೇಳಿದರು.

ಈ ಸಭೆಯಲ್ಲಿ ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರಾದ ಪಿ.ಹೇಮಂತರಾಜ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹೊಸಪೇಟೆ ಸೈಟ್ ಇಂಜಿನಿಯರ್ ದಾನೇಶ್ವರ್, ಆರ್.ಟಿ.ಓ ಲಕ್ಷ್ಮೀಕಾಂತ ನಾಲವಾರ, ನಗರಸಭೆ ಆಯುಕ್ತರಾದ ಗಣಪತಿ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ನಂದಕುಮಾರ್, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಕೊಪ್ಪಳ ವಿಭಾಗದ ಅಧಿಕಾರಿ ರಾಜೇಂದ್ರ ಜಾಧವ್ ಸೇರಿದಂತೆ ಇತರರು ಉಪಸ್ಥಿತರಿದ್ದರು.